Commissioner. Health Department ಅವರಿಗೆ ಹೇಳಿ ಇವರನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :– ವಿಷಯ ಗೊತ್ತಾದ ತಕ್ಷಣ ಈಗಾಗಲೇ ನಾನು ನನ್ನ ಛೇಂಬರ್‌ನಲ್ಲಿಯೇ ಮಾತನಾಡಿದ್ದೇನೆ. ರೈತರಿಗೆ ಶುಶ್ರೂಷೆ ಕೊಡತಕ್ಕಂಥಾದ್ದೇನಿದೆ ಮತ್ತು ಸರ್ಕಾರದಿಂದ ತಕ್ಷಣ ಏನಾದರೂ ಅವರಿಗೆ ಆರೋಗ್ಯದ ಖರ್ಚಿಗೆ ಪರಿಹಾರ ಕೊಡತಕ್ಕಂಥಾದ್ದಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ.

5. ಶಾಸನ ರಚನೆ

ವಿಧೇಯಕಗಳ ಮಂಡನೆ

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2007

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿ.ಎಂ. ಉದಾಸಿ (**ಗ್ರಾಮೀಣಾಭಿವೃದ್ಧಿ** ಮತ್ತು ಪಂಚಾಯತ್‌ರಾಜ್ **ಮಂತ್ರಿಗಳು**) :– ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ;

"2007ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಎಂ. ಉದಾಸಿ (**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು**) :– ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :– ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರು :– ಈಗ ಸಮಯ 1.45 ಗಂಟೆಯಾಗಿದೆ. ಭೂ ಕಂದಾಯ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಧರ್ಮಸಿಂಗ್ :- ಅದರ ಬಗ್ಗೆ ಇನ್ನೂ ಮಾತನಾಡಬೇಕಾಗಿದೆ. ಇದು ಬಹಳ ಮಹತ್ವವಾದ Bill ಇದೆ. ಇದು ಬಿಟ್ಟು ನೀವು ಹೇಗೆ ಅವರನ್ನು ಕರೆಯುತ್ತೀರಿ? ನಿನ್ನೆ ಪೀಠಾಧ್ಯಕ್ಷರು abrupt ಆಗಿ adjourn ಮಾಡಿದರು.

ಅಧ್ಯಕ್ಷರು :- 2-3 ಗಂಟೆಗಳ ಕಾಲ ಚರ್ಚೆಯಾಗಿದೆ. ಎಲ್ಲ ಸದಸ್ಯರೂ ಮಾತನಾಡಿದ್ದಾರೆ. ಆದ್ದರಿಂದ, ಅವರು ಉತ್ತರ ಹೇಳಲಿ.

ಶ್ರೀ ಧರ್ಮಸಿಂಗ್ :- ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು :- ನೀವು ಇದರ ಬಗ್ಗೆ ಮಾತನಾಡಿಲ್ಲವೇ?

ಶ್ರೀ ಧರ್ಮಸಿಂಗ್ :- ನಾನು ಮಾತನಾಡಿಲ್ಲ. ಖರ್ಗೆಯವರು, ಸಿದ್ದರಾಮಯ್ಯನವರು....

ಅಧ್ಯಕ್ಷರು :- ಎಲ್ಲ ಮಾತನಾಡಿದರಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ಇನ್ನೂ ಅದರ ಬಗ್ಗೆ ಮಾತನಾಡಿಲ್ಲ.

ಶ್ರೀ ಧರ್ಮಸಿಂಗ್ :- ಊಟವಾದ ನಂತರ ಮುಂದುವರಿಸೋಣ.

ಅಧ್ಯಕ್ಷರು :- ಊಟವಾದ ಮೇಲೆ ಅಂತಲ್ಲ. ನೀವು 5-10 ನಿಮಿಷ ಮಾತನಾಡಿದರೆ, ಅವರು ಉತ್ತರ ಕೊಡುತ್ತಾರೆ. ಇದನ್ನು ಮುಗಿಸಿಬಿಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ದಯವಿಟ್ಟು, ಮಧ್ಯಾಹ್ನದ ನಂತರ ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು :- ಇದು ಮುಗಿದು ಹೋಗಲಿ. ಏಕೆಂದರೆ, ಇನ್ನೂ ಅನೇಕ Bill ಗಳು ಹಾಗೇ ಇವೆ. ಬಹಳ ಪ್ರಮುಖವಾಗಿ pass ಆಗಬೇಕಾದವು ಹಾಗೇ ಇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಧ್ಯಾಹ್ನ ತೆಗೆದುಕೊಳ್ಳಿ. ನಾವಿನ್ನೂ ಮಾತನಾಡಬೇಕಿದೆ. ಈಗ ಸಮಯ 1.45 ಆಗಿದೆ. ಮಧ್ಯಾಹ್ನ ತೆಗೆದುಕೊಳ್ಳಿ ಸಾರ್.

ಅಧ್ಯಕ್ಷರು :- ನೀವು ನಿನ್ನೆ ಮಾತನಾಡಿದಿರಲ್ಲ ಸಾರ್.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಈಗಾಗಲೇ....

ಶ್ರೀ ಧರ್ಮಸಿಂಗ್ :– ಶೆಟ್ಟರ್‌ರವರೆ, ಆಗುವುದಿಲ್ಲ. ನಿನ್ನೆ ನಿಮ್ಮ ಭಟ್‌ರವರು ಸೀಟ್‌ನಲ್ಲಿ ಕುಳಿತಿದ್ದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು :– ನೀವು ಮಾತನಾಡಿ. 5 ನಿಮಿಷಗಳಲ್ಲಿ ನಿಮ್ಮ ಸಲಹೆಗಳನ್ನು ಹೇಳಿ. (ಗೊಂದಲ) ಈಗ Opposition Leader ಮಾತನಾಡುತ್ತಾರೆ. ಕುಳಿತುಕೊಳ್ಳಿ. Opposition Leader ಅವರು ವಿಚಾರಗಳನ್ನು ಹೇಳುತ್ತಾರೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ಇವತ್ತು ಏಕೋ ಸಮ್ಮಿಶ್ರ ಸರ್ಕಾರದವರು ತರಾತುರಿಯಾಗಿ ಈ Bill ತಂದಿದ್ದಾರೆ. (ಗೊಂದಲ) ಈಗಾಗಲೇ ನಮ್ಮ ಸದನ ಸಮಿತಿ ಅಧ್ಯಕ್ಷರಾಗಿರುವ ಎ.ಟಿ. ರಾಮಸ್ವಾಮಿಯವರ ನೇತೃತ್ವದಲ್ಲಿ ಒಂದು ಸದನ ಸಮಿತಿ ರಚನೆಯಾಗಿತ್ತು. ಭೂ ಕಬಳಿಕೆ ಬಗ್ಗೆ ಬೆಂಗಳೂರು ಸುತ್ತಮುತ್ತಲಿರುವ ಜಮೀನುಗಳ ವಿಚಾರ ಬೇರೆ. Bill ನಲ್ಲಿ 5–6 clause ಇದೆ. Rural area ದಲ್ಲಿ ಸಾಕಷ್ಟು harassment ಆಗುತ್ತಿದೆ. ಬೇರೆ ಬೇರೆ ಲಂಬಾಣಿ ತಾಂಡಾ ಅಭಿವೃದ್ಧಿಗೆ ಸುಮಾರು 20 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಯಡಿಯೂರಪ್ಪನವರು ಹೇಳಿದರು. ಇವತ್ತು ಎಲ್ಲ ಕಡೆ ಸಾಕಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ನಾವು ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಇವತ್ತು regularize ಮಾಡತಕ್ಕಂಥ ಒಂದು ಬಿಲ್ ಇದು. ಅದಕ್ಕೆ Sub-Committee ಕೂಡ ರಚನೆಯಾಗಿದೆ.

ಇವತ್ತ ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ. 1940ನಲ್ಲಿ ಬೆಂಗಳೂರಿನ ಜನಸಂಖ್ಯೆ ಮೂರು ಲಕ್ಷ. ಈಗ ಒಂದೂ ಕೋಟಿಗಿಂತಲೂ ಹೆಚ್ಚಾಗಿದೆ. ಕೊಳಚೆ ಪ್ರದೇಶದಲ್ಲಿರತಕ್ಕಂಥ ಬಡವರು ಏನು ಇದ್ದಾರೆ, ಅವರ ಬಗ್ಗೆ ಕೂಡ ಇವತ್ತು ವಿಚಾರ ಮಾಡಬೇಕಾಗಿದೆ. ಇಂಥ ಎಲ್ಲಾ ಸಮಸ್ಯೆಗಳನ್ನು ಬದಿಗಿಟ್ಟು ಇವತ್ತು regularize ಮಾಡತಕ್ಕಂಥ ರೀತಿಯಲ್ಲಿ ತಾವು ಕ್ರಮ ಕೈಗೊಳ್ಳಬೇಕು. ಶ್ರೀನಿವಾಸ ಮೂರ್ತಿಯವರು ಇದ್ದರು. ಎಲ್ಲಾ ಕಡೆಗೂ ಮದ್ರಾಸ್‌ನಲ್ಲಿ ಯಾವ ರೀತಿ fine ಹಾಕಿ regularize ಮಾಡುತ್ತಾರೆ, ಬಾಂಬೆನಲ್ಲಿ ಹೇಗೆ ಮಾಡುತ್ತಾರೆ, ಆಂಧ್ರದಲ್ಲಿ ಹೇಗೆ ಮಾಡುತ್ತಾರೆ, ಅದಕ್ಕೆ ನಾವು ಏನು ಹೇಳಿದ್ದು, ದಿವಂಗತ ಗುಂಡೂರಾವ್‌ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ನಾನು HUD

Minister ಆದಾಗ ಆಗ ನಾವೇನು ಮಾಡಿದ್ದೇವೆಂದರೆ, ಇವತ್ತು Metropolitan Authority ಆಗಲೇಬೇಕು. ಬೆಂಗಳೂರು ನಗರಕ್ಕೆ ಇವತ್ತಿನ ದಿವಸ Karnataka Electricity Board ಇದೆ. Housing Board ಇದೆ, Slum Board ಇದೆ, ಎಲ್ಲವನ್ನೂ ಕೂಡಿ ನಿಯಂತ್ರಣ ಮಾಡತಕ್ಕಂಥ authority ಆಗಬೇಕು.

ಇವೆಲ್ಲಾ ಸಮಸ್ಯೆಗಳಿವೆ. ನಿನ್ನೆ ಕೂಡ ಮಾನ್ಯರಾದ ರಾಮಲಿಂಗಾರೆಡ್ಡಿಯವರು ಮತ್ತು ಎ.ಕೃಷ್ಣಪ್ಪನವರು ಮತ್ತು ವಿಶೇಷವಾಗಿ ವಿ.ಸೋಮಣ್ಣನವರು ಕೂಡ ಇದರ ಬಗ್ಗೆ ವಿರೋಧಿಸಿದ್ದಾರೆ. ಮಾನ್ಯ ವಿ.ಸೋಮಣ್ಣನವರು ಕೂಡ ಈ ಒಂದು ಖಾತೆಯ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸಿದ್ದರಾಮಯ್ಯನವರು ಕೂಡ ಈ ಬಗ್ಗೆ ಮಾತನಾಡಿದ್ದಾರೆ. ಇವತ್ತು ಶ್ರೀರಾಮರೆಡ್ಡಿಯವರು ಕೂಡ ಮಾತನಾಡಬೇಕಾಗಿದೆ. ಅವರು ಯಾರು ಕೇಳುವುದಿಲ್ಲ ಎಷ್ಟು ಹೊತ್ತಿಗೆ ಎಲ್ಲಿಗೆ ಹೋಗಬೇಕು ಏನು ಮಾಡಬೇಕು ಎಂದು ವಿಚಾರ ಮಾಡುತ್ತಾರೆ. ಇದು ಪ್ರಾಕ್ಟಿಕಲ್. ಅವರು ಕೇಳುವುದಿಲ್ಲ... house order ನಲ್ಲಿ ಇಲ್ಲ. ಅವರೆಲ್ಲ ಒಟ್ಟಾಗಿ ಹತ್ತು ಮಂದಿ ನಿಂತಿದ್ದಾರೆ. ನೀವು bell ಗಟ್ಟಿಯಾಗಿ ಹೊಡೆಯಿರಿ, ನೀವು ಹೊಡೆಯುವ bell ನಮಗೆ ಕೇಳಿಸುವುದಿಲ್ಲ ಇನ್ನು ಅವರಿಗೆ ಹೇಗೆ ಕೇಳಿಸುತ್ತದೆ? ನೀವು ಬಂದು ಪೀಠದ ಮೇಲೆ ಕುಳಿತರೆ ನಿಮ್ಮ presence ಇರುತ್ತದೆ. ಇವೆಲ್ಲಾ ವಿಚಾರಗಳು ಇವೆ. ಈಗಾಗಲೇ ಮಾನ್ಯ ಖರ್ಗೆಯವರು ಅಕ್ರಮಗಳು regularise ಆಗತಕ್ಕಂಥಾದ್ದರ ಬಗ್ಗೆ ಹೇಳಿದ್ದಾರೆ. You have to educate the people. ನಾವು ಎಷ್ಟೇ notification ಮಾಡಿದರೂ ಕೂಡ ಬಡವರು ಬಂದು ಅಲ್ಲಿ application ಹಾಕುವುದಿಲ್ಲ. ಇಂಥ ಎಲ್ಲಾ ಪರಿಸ್ಥಿತಿಯಲ್ಲಿ ಏನು ಮಾಡುತ್ತಿದ್ದಾರೆ, ಇವತ್ತು ಬಹಳ ಲೆಕ್ಕ ಹಾಕಿ, ಬೆಂಗಳೂರು ಸುತ್ತಮುತ್ತಲಿರತಕ್ಕಂಥ ಭೂ ಕಬಳಿಕೆಯನ್ನು ಮುಂದಿಟ್ಟುಕೊಂಡು ಕರ್ನಾಟಕ ರಾಜ್ಯದ ಎಲ್ಲಾ ಬಡವರ ಮನೆಗಳನ್ನು ನೆಲಸಮ ಮಾಡಲಿಕ್ಕೆ ಹೊರಟಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್ ರವರು ಹುಬ್ಬಳ್ಳಿ–ಧಾರವಾಡದಿಂದ ಬರುತ್ತಾರೆ ಅವರಿಗೆ ಎಷ್ಟು ಸಮಸ್ಯೆ ಇದೆ ಎಂದು ಗೊತ್ತಾಗಬೇಕು. ಮಂಗಳೂರಿನಲ್ಲಿ ಎಷ್ಟು ಸಮಸ್ಯೆ ಇದೆ, ಗುಲ್ಬರ್ಗಾದಲ್ಲಿ ಎಷ್ಟು ಇದೆ, corporation ಇರುವ ಎಲ್ಲಾ ಕಡೆಗೂ ಇಂಥ ಸಮಸ್ಯೆಗಳಿವೆ. ನೀವು ನಿಮ್ಮ ಉತ್ತರದಲ್ಲಿ ಏನೂ ಹೇಳಲಿಕ್ಕೆ ಆಗುವುದಿಲ್ಲ, ಅದಕ್ಕೆ ನಾನು ಏನು ಹೇಳುವುದು, ಮಾನ್ಯ ಮುಖ್ಯಮಂತ್ರಿಗಳೇ, ತರಾತುರಿಯಲ್ಲಿ ಈ ಬಿಲ್ ಅನ್ನು ತಂದಿದ್ದೀರಿ ಇದನ್ನೇ

prestige ಆಗಿ ತೆಗೆದುಕೊಳ್ಳಬೇಡಿ. ಇದನ್ನು ನಾವೇ ಮಾಡಲೇಬೇಕು ಎಂದರೆ ಅದು ಅಲ್ಲ. ಇದನ್ನು Joint Selection Committee ಗೆ refer ಮಾಡಿ. ಎಲ್ಲರೂ ಕೂಡ ಇದರ ಬಗ್ಗೆ ವಿಚಾರ ಮಾಡಲಿ.

ನಾವು ಇವತ್ತು ಬೆಂಗಳೂರಿಗೆ contribute ಮಾಡುವ ರೀತಿಯಲ್ಲಿ, ನೀವು ಬಿಲ್ ತಂದು, ಇದರಲ್ಲಿ ಎರಡು ಇದೆ, ನಿಮ್ಮ ಮನಸ್ಸಿನಲ್ಲಿ ಇರುವುದು ಬೇರೆ. ಅದನ್ನು ನೀವು ಸ್ಪಷ್ಟಪಡಿಸಿ. ಯಾರ್‍ಯಾರು ಇದ್ದಾರೆ ಅವರೆಲ್ಲರನ್ನೂ ಹಿಡಿಯಿರಿ ನಾವು ಅಡ್ಡಬರುವುದಿಲ್ಲ. ನಾವೆಲ್ಲರೂ ಇದನ್ನು ಹೇಳಿದ್ದೇವೆ. ನೀವು ಏನು ಮಾಡಬೇಕಾಗಿದೆ ಅದನ್ನು ಮಾಡಿ. ಆದರೆ, ಇವತ್ತಿನ ದಿವಸ ಬಡವರು ಎಲ್ಲಾ ಕಡೆಗೆ encrochment ಮಾಡಿದ್ದಾರೆ, ಇವರನ್ನು ನೀವು ನೆಲಸಮ ಮಾಡಲಿಕ್ಕೆ ಹೊರಟರೆ, ನಾಳೆ ಇದರಿಂದಾಗಿ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತದೆ. ಲಂಬಾಣಿ ಜನರಿಗೆ ಸಹಾಯ ಮಾಡಲಿಕ್ಕೆ ಹೊರಟಂಥ ಈ ಸರ್ಕಾರ ಯಾವ ರೀತಿಯಾಗಿ ಜನರು ನಿಮ್ಮನ್ನು ಸ್ವಾಗತಿಸುತ್ತದೆಂದು ನಿಮಗೆ ಗೊತ್ತಾಗುತ್ತದೆ. ಅದಕ್ಕೆ ನೀವೇನು ಬಿಲ್ ತಂದಿದ್ದೀರಿ, you have to discuss the pros and cons.

ನೀವು ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡು ಇದನ್ನು Joint Select Committee ಗೆ refer ಮಾಡಿ ಮುಂದಿನ ಸದನದಲ್ಲಿ ಮಾಡಿ. ತರಾತುರಿಯಲ್ಲಿ ತಂದು ಬಿಲ್ ಪಾಸ್ ಮಾಡಿಕೊಂಡು ಹೋಗತಕ್ಕಂಥಾದ್ದು ಯಾವ ರೀತಿಯಾಗುತ್ತದೆಂದರೆ, ಯಡಿಯೂರಪ್ಪನವರು ಬಜೆಟ್ ಮೇಲೆ ಒಂದು ರೀತಿ ಮಾಡುತ್ತಿದ್ದಾರೆ, ಆ ತರಹದ attitude ಸರಿಯಿಲ್ಲ. ನಾವು oppose ಮಾಡುತ್ತೇವೆ, ನಾವು ವಿರೋಧಿಸುತ್ತೇವೆ, ಇದನ್ನು Joint selection committee ಗೆ refer ಆಗಬೇಕು. ಬಡವರ ವಿರೋಧಿಯಾಗಿರತಕ್ಕಂಥ ಇಂಥ ಒಂದು ಬಿಲ್, ಇದು ಬಡವರಿಗೆ ತೊಂದರೆ ಕೊಡತಕ್ಕಂಥ ಬಿಲ್ ಇದಾಗಿದೆ, ಕರ್ನಾಟಕ ರಾಜ್ಯದ ಇಡೀ ಬುಡಕಟ್ಟು ಜನಾಂಗಕ್ಕೆ, ಬಡತನ ರೇಖೆಯಲ್ಲಿರತಕ್ಕಂಥ ಜನರ ವಿರೋಧಿ ಬಿಲ್ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ನಾವು ಈ ಬಿಲ್ ಅನ್ನು ಸ್ವಾಗತ ಮಾಡುತ್ತಿದ್ದೇನೆ, ಬಿಲ್ ತರಬೇಕು, ಭೂ ಕಳ್ಳರನ್ನು ಹಿಡಿಯಲೇಬೇಕು. ಅದರಲ್ಲಿ ಎರಡು ಮಾತಿಲ್ಲ. ಆ ಬಿಲ್ ಅನ್ನು ನಾವು ಸ್ವಾಗತಿಸುತ್ತಿದ್ದೇವೆ, ಆದರೆ ಬಡರೈತರು, ಹಳ್ಳಿಗಾಡಿನ ಪ್ರದೇಶಗಳಲ್ಲಿ ಯಾರು ಉಳುಮೆ

ಮಾಡಿಕೊಳ್ಳುತ್ತಿದ್ದಾರೆ, ಅವರಿಗೆ ಇದನ್ನು apply ಮಾಡಬಾರದು, ಅದು ಒಂದು ತಿದ್ದುಪಡಿಯನ್ನು ಅಥವಾ ಹೇಳಿಕೆ ಕೊಡುವುದರ ಮೂಲಕ ಅದನ್ನು ಬಿಟ್ಟು ಆ ಬಿಲ್ ಅನ್ನು ಪಾಸ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ಮುಖ್ಯಮಂತ್ರಿ) :- ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಿಲ್ ಅನ್ನು ತರಾತುರಿಯಲ್ಲಿ ತರಲಿಕ್ಕೆ ಹೊರಟಿದ್ದಾರೆಂದು ಸದನದ ಮುಂದೆ ಪ್ರಸ್ತಾಪಿಸಿದ್ದಾರೆ. ಇದರಲ್ಲಿ ಯಾವುದೇ ರೀತಿಯ ತರಾತುರಿಯಲ್ಲಿ ಇಲ್ಲ. ರಾಜ್ಯದ ಜನರನ್ನಾಗಲಿ, ಸದನವನ್ನಾಗಲಿ, ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಶ್ನೆಯಿಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಸೋಮಣ್ಣನವರು ಇರಬಹುದು, ರಾಮಲಿಂಗ ರೆಡ್ಡಿ ಇರಬಹುದು, ಇನ್ನೂ ಹಲವಾರು ಜನ ಮಾನ್ಯ ಸದಸ್ಯರೇನು ಪ್ರಸ್ತಾಪಿಸಿದ್ದಾರೆ, ಈ ಒಂದು ಬಿಲ್ ನಿಂದ ಬಡವರಿಗೆ ಯಾವುದೇ ಕಾರಣಕ್ಕೂ ಅನಾನುಕೂಲವಾಗತಕ್ಕಂಥ ತೀರ್ಮಾನವನ್ನು ನಾವು ಮಾಡುವುದಿಲ್ಲ. ನಾವು ಅಲ್ಲಿಯೇ ಒಂದು ಕ್ಲಾಸ್ ಹಾಕಿದ್ದೇವೆ. Special scheme ಅನ್ನು ನಾವು ತರುವುದರ ಮೂಲಕ ಬಡವರು ಯಾರು ಇದ್ದಾರೆ ಅವರಿಗೆ revenue site ನಲ್ಲಿ ಮನೆ ಕಟ್ಟಿದಂಥವರಿಗೆ regularize ಮಾಡತಕ್ಕಂಥ ಕಾರ್ಯಕ್ರಮ ಏನು ಇದೆ, ಆ ಕಾರ್ಯಕ್ರಮವನ್ನು implement ಮಾಡತಕ್ಕಂಥದ್ದುಕ್ಕೂ ನಾವು ಅದರಲ್ಲಿ provision ಮಾಡಿದ್ದೇವೆ. ಇದರಲ್ಲಿ ಯಾವ ಅನುಮಾನಗಳು ಬೇಕಿಲ್ಲ.

ಅದರ ಜೊತೆಗೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಯಾರು ಸಣ್ಣ ಹಿಡುವಳಿದಾರರು ಇದ್ದಾರೆ, ಅವರನ್ನು ಒಕ್ಕಲೆಬ್ಬಿಸತಕ್ಕಂಥ ಕೆಲಸವಿಲ್ಲ. ಆ ವಿಷಯದಲ್ಲಿ ಈ ಸಂದರ್ಭದಲ್ಲಿ ಈ ಸದನದಲ್ಲಿರುವ ಸದಸ್ಯರಲ್ಲಿರತಕ್ಕಂಥ ಅನುಮಾನಗಳಿಗೆ ನಾನು ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ. ಈ ಸರ್ಕಾರದ ಮೂಲಕ ಬಡವರನ್ನು ಒಕ್ಕಲೆಬ್ಬಿಸಿ ಶ್ರೀಮಂತರಿಗೆ ಅನುಕೂಲ ಮಾಡತಕ್ಕಂಥಾದ್ದಕ್ಕೆ ಈ ಬಿಲ್ ಅವಕಾಶ ನೀಡುವುದಿಲ್ಲ. ಶ್ರೀಮಂತರನ್ನು ಒಕ್ಕಲೆಬ್ಬಿಸುವಂಥಾದ್ದಕ್ಕೋಸ್ಕರನೇ ಈ ಒಂದು ಬಿಲ್ ಅನ್ನು ನಾವು ತಂದಿರತಕ್ಕಂಥಾದ್ದು. ಬಡವರಿಗೆ ಯಾವುದೇ ಕಾರಣಕ್ಕೂ ಅನಾನುಕೂಲವಾಗುವುದಿಲ್ಲ. Regularisation ಬಗ್ಗೆ ಕೆಲವು ದಿವಸಗಳಿಂದ ಚರ್ಚೆಗಳು ನಡೆಯುತ್ತಿವೆ, ಹಿಂದೆ ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಗಳಾಗಿದ್ದಾಗ ಸೋಮಣ್ಣನವರು, ಬೆಂಗಳೂರು ನಗರದ ಸಮಸ್ಯೆ ಏನಿತ್ತು ಇದನ್ನು ಸರಿಪಡಿಸಬೇಕೆನ್ನುವ ದೃಷ್ಟಿಯಿಂದ ಆ ದಿವಸ ಏನು ತೀರ್ಮಾನವಾಗಿ ಸುಮಾರು 10-12 ವರ್ಷಗಳಿಂದ ಹಾಗೇ ನಿಂತಿದೆ, ಈ ಒಂದು ಕೆಲಸವನ್ನು

ಮಾಡಲು ಕೆಲವೇ ಕೆಲವು ದಿನಗಳಲ್ಲಿ ನಾವು ಚಾಲನೆ ಕೊಡುತ್ತಿದ್ದೇವೆ. ಸದಸ್ಯರಲ್ಲಿ ಯಾವುದೇ ಕಾರಣಕ್ಕೂ ಅನುಮಾನಗಳೂ ಬೇಡವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) :- ಮಾನ್ಯ ಅಧ್ಯಕ್ಷರೆ, ನಮ್ಮದೇನು ಎಂದರೆ, ಇಂಥ ಕಾನೂನುಗಳನ್ನು ತರುವಾಗ ಬಹಳ ಎಚ್ಚರಿಕೆಯಿಂದ ತರಬೇಕು. ಇದಕ್ಕೆ ಯಾರೂ ವಿರೋಧಿಸುತ್ತಿಲ್ಲ. ಯಾರು ಭೂಕಬಳಿಕೆ ಮಾಡುತ್ತಾರೋ ಅವರಿಗೆ ಶಿಕ್ಷೆಯಾಗಲೇ ಬೇಕು. ಅಂಥ ಕುಳಗಳಿಗೆ ನೀವು ಜೈಲಿಗೆ ಹಾಕಿ, ಅದರ ನೆಪದಲ್ಲಿ ಲಕ್ಷಾಂತರ ಜನ ಬಡವರಿಗೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ, ನಾವೇನು ಹೇಳಿದ್ದು ಎಂದರೆ, Joint Selection Committee ಗೆ ನೀವು refer ಮಾಡಿದರೆ, ಅದರ ಸಾಧಕ-ಬಾಧಕಗಳನ್ನು ನೋಡಿಕೊಂಡು ನೀವು ಬೇಕಾದರೆ consult ಮಾಡಿ ಒಂದೇ ತಿಂಗಳೊಳಗೆ decide ಮಾಡಿ. But it is better to consult everybody, take them into confidence and then do it. ಅದನ್ನು ಬಿಟ್ಟು, ಇಲ್ಲ ನಾವು ಹೇಳಿದ್ದೇ ಸರಿ, as if ಈಗ ಶ್ರೀರಾಂರೆಡ್ಡಿಯವರು ಹೇಳಿದರು. ಬೇರೆಯವರು ಏನಾದರೂ ವಿರುದ್ಧ ಇದ್ದಾರೆಯೆ? ನಾವು ಸ್ವಾಗತ ಮಾಡುತ್ತೇವೆಂದು ಹೇಳಿದರು. ಅದರ ಪ್ರಶ್ನೆಯಲ್ಲ.

ಇಂಥ ಕಾನೂನುಗಳಿಗೆ ಈ ಸದನದಲ್ಲಿ ಭೂ ಸುಧಾರಣೆ ಕಾನೂನು ತಿದ್ದುಪಡಿ ತಂದಾಗ ರಾತ್ರಿಯಿಂದ ಬೆಳಿಗ್ಗೆನವರೆಗೆ ನಾವು ಇಲ್ಲಿ ಮಲಗಿದ್ದೆವು. ಅದನ್ನು ಏಕೆ ತಂದಿರಿ? ಅದಕ್ಕೆ ನಮ್ಮ ಪ್ರಶ್ನೆ ಏನೆಂದರೆ, ಇದು ಜಮೀನಿಗೆ ಸಂಬಂಧಪಟ್ಟಂಥಾದ್ದು. ಮತ್ತು ಲಕ್ಷಾಂತರ ಜನ ಈ ಒಂದು unauthorized cultivations scheme ನಲ್ಲಿ ಜೈಲಿಗೆ ಹೋಗಿದ್ದಾರೆ, criminal ಕೇಸ್ ಹಾಕಿ ಕೊಂಡಿದ್ದಾರೆ, ಹೊಡೆತ ತಿಂದಿದ್ದಾರೆ, ಎಲ್ಲಾ political parties ಕೂಡ ಈ ಬಗ್ಗೆ agitation ಮಾಡಿದ್ದಾರೆ, ಈಗ ಸಾಕಷ್ಟು ಸಕ್ರಮಗೊಳಿಸಿದ್ದಾರೆ. ಆದರೂ ಇನ್ನೂ ಅನೇಕ ಕೇಸ್ ಇವೆ. ಅದರೊಳಗೆ ಏನು ಇದೆ, abetment ಮಾಡಿದರು. ಕೆಲವು ಸಲ ಏನಾಗುತ್ತದೆ politically ಒಬ್ಬ ಎಂಎಲ್‌ಎ ಗೆ ಆ ಲೋಕಲ್ ಲೀಡರ್‌ಗೆ ಆಗುವುದಿಲ್ಲ. ಅಥವಾ ಯಾರೋ ಒಬ್ಬರು progressive, ಆಗಿದ್ದು ಇದನ್ನು ಬಡವರಿಗೆ ಸಕ್ರಮಗೊಳಿಸೆಂದು abetment ಕೇಸ್ ಹಾಕಿ ಅವನ್ನು ಒಳಗೆ ಹಾಕಿರಿ ಎನ್ನುತ್ತಾರೆ, ಇಂಥವೆಲ್ಲವೂ ಬರುತ್ತವೆ.

ಅದಕ್ಕಾಗಿ ಭೂ ಸುಧಾರಣೆಯಂಥ ಕಾನೂನಿಗೆ Joint Selection Committee ಗೆ refer ಮಾಡಿ ಈ ಸದನದಲ್ಲಿ 3-4 ತಿಂಗಳು ಚರ್ಚೆಯಾಗಿ ಬಂತು. ಇವತ್ತು, drastic steps ನೀವು ತೆಗೆದುಕೊಳ್ಳುತ್ತಿದ್ದೀರಿ. Partially I welcome it. ಉಳಿದಿದ್ದನ್ನು ಇದರಲ್ಲಿ ಸರಿಯಿಲ್ಲ ಎನ್ನತಕ್ಕಂಥ ಮಾತು ಹೇಳಿದ್ದೇವೆ ನಿಮಗೆ ಅದನ್ನು ಸರಿಪಡಿಸಬೇಕು ಎನ್ನತಕ್ಕಂಥ ಇಚ್ಛೆಯಿದ್ದರೆ Joint Selection Committee ಗೆ refer ಮಾಡಿ ಒಂದು ತಿಂಗಳೊಳಗಾಗಿ ಅಥವಾ ಆದಷ್ಟು ಬೇಗನೆ ಅದನ್ನು ಜಾರಿಗೆ ತಂದುಬಿಡಿ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ತರಾತುರಿಯಲ್ಲಿ ತಂದು ಆಮೇಲೆ relaxation ಮಾಡುವುದು ಸರಿಯಲ್ಲ. ಏಕೆಂದರೆ ಯಾವಾಗಲೂ ಕೂಡ ನಿಮ್ಮ ಸರ್ಕಾರ ಮೊದಲು announce ಮಾಡುತ್ತದೆ ಆಮೇಲೆ ಚಿಂತನೆ ಮಾಡುತ್ತದೆ. ಅದಕ್ಕೆ ನಾನು ಏನು ಹೇಳುವುದು ಎಂದರೆ, ಚಿಂತನೆ ಮಾಡಿಯೇ ತೆಗೆದುಕೊಂಡು ಬನ್ನಿ ಆಮೇಲೆ ಯೋಚಿಸುವುದು ಬೇಡ. ಅದಕ್ಕೆ ನೀವು Joint Selection Committee ಗೆ refer ಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಇನ್ನಿತರ ಎಲ್ಲಾ ಸದಸ್ಯರುಗಳು ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಬಹಳ ಮಹತ್ವದ ಬಿಲ್ ಅನ್ನು ಈ ಸದನದಲ್ಲಿ ನಾವು ತಂದಿದ್ದೇವೆ. ಸರ್ಕಾರಿ ಜಮೀನುಗಳನ್ನು ಯಾರು ಒತ್ತುವರಿ ಮಾಡಿದ್ದಾರೆಯೋ ಅಂಥವರನ್ನು ಜೈಲು ವಾಸದ ಶಿಕ್ಷೆ ಕೊಡತಕ್ಕಂಥ ಒಂದು ದಿಟ್ಟ ನಿರ್ಧಾರವನ್ನು ತೆಗೆದುಕೊಂಡು ಈ ಬಿಲ್ ಅನ್ನು ನಾವು ಇಲ್ಲಿ ಮಂಡನೆ ಮಾಡುತ್ತಿದ್ದೇವೆ. ಈಗಾಗಲೇ ಸುಗ್ರೀವಾಜ್ಞೆ ಮುಖಾಂತರ ಈ ಬಿಲ್ ಅನ್ನು ಅನುಷ್ಠಾನ ಮಾಡಿದ್ದೇವೆ. ಇದನ್ನು ಮಾಡಿದ ಮೇಲೆ ಎಷ್ಟು ಹೆದರಿಕೆ ಪ್ರಾರಂಭವಾಗಿದೆ ಎನ್ನತಕ್ಕಂಥಾದ್ದು ತಮಗೆಲ್ಲಾ ಗೊತ್ತಾಗಿದೆ.

ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಇವತ್ತಿನ ದಿವಸ ಭೂ ಕಬಳಿಕೆ ಮಾಡಿರುವವರಿಂದ ಜಮೀನನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಕೆಲಸ ಕೂಡ ಪ್ರಾರಂಭವಾಗಿದೆ. ಮಾನ್ಯ ಸದಸ್ಯರುಗಳು ಈಗಾಗಲೇ ಪ್ರಸ್ತಾಪ ಮಾಡಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ. ಮತ್ತೆ ನಮ್ಮ ಶಾಸಕರಲ್ಲಿದ್ದಂಥ ಕೆಲವು ಸಂಶಯಗಳಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ

ಚರ್ಚೆ ಕೂಡ ಮಾಡಿದ್ದೇವೆ. ಇವತ್ತಿನ ದಿವಸ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗ ಮಾಡುತ್ತಿರತಕ್ಕಂಥವವರ ಬಗ್ಗೆ ಇದರಲ್ಲಿ ಪ್ರಾವಿಷನ್ ಇಲ್ಲ.

ಇವತ್ತು ಕೃಷಿ ಭೂಮಿಯನ್ನು ಕೃಷಿಯೇತರ ಸಲುವಾಗಿ ಉಪಯೋಗ ಮಾಡುತ್ತಿರುವ ಬಗ್ಗೆ ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ರಾಮಲಿಂಗರೆಡ್ಡಿಯವರು ಸಹ ಹೇಳಿದ್ದಾರೆ. ಕೃಷಿ ಭೂಮಿಯನ್ನು ಕೃಷಿಯೇತರ ಸಲುವಾಗಿ ಉಪಯೋಗ ಮಾಡುವುದಕ್ಕೆ ಕನ್ವರ್ಷನ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು. ಆದರೆ, ಕನ್ವರ್ಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಿಲ್ಲ. ಅಪ್ರೊಪ್ರಿಯೇಟ್ ಅಥಾರಿಟಿಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕು, ಆದರೆ, ತೆಗೆದುಕೊಳ್ಳುವುದಿಲ್ಲ. ಇಂಥವುಗಳು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಅದಕ್ಕೆ ನಾವು ರೆವಿನ್ಯು ಸೈಟ್ ಎಂದು ಗೌರವದ ಹೆಸರನ್ನು ಕೊಡುತ್ತಿದ್ದೇವೆ. ಉತ್ತರ ಕರ್ನಾಟಕಕ್ಕೆ ಬಂದು ರೆವಿನ್ಯು ಸೈಟ್ ಬಗ್ಗೆ ಏನೆಂದು ಕೇಳಿದರೆ, ರೆವಿನ್ಯು ಸೈಟ್‌ಗಳನ್ನು ಸರ್ಕಾರಿ ಸೈಟ್ ಎಂದು ಹೇಳುತ್ತಾರೆ. ಆದರೆ, ಬೆಂಗಳೂರಿನಲ್ಲಿ ಕೇಳಿದರೆ ಅದಕ್ಕೆ ಬೇರೆ ಅರ್ಥ ಹೇಳುತ್ತಾರೆ. ಆದ್ದರಿಂದ, ಈ ರೀತಿಯಾಗಿ ಅನಧಿಕೃತವಾಗಿ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವಂತೆ, ಕಾನೂನುಗಳನ್ನು ಮತ್ತು ನಿಯಮಗಳನ್ನು ಮೀರಿ ಅನಧಿಕೃತವಾಗಿ ನಡೆದುಕೊಂಡು ಬಂದಿರತಕ್ಕಂಥವಕ್ಕೆ ಒಂದು ಹಂತದಲ್ಲಿ ಕಡಿವಾಣ ಹಾಕಬೇಕಾಗಿದ್ದರಿಂದ, ಇವತ್ತಿನ ದಿವಸ ಈ ಒಂದು ಕಾನೂನನ್ನು ತೆಗೆದುಕೊಂಡು ಬರುತ್ತಿದ್ದೇವೆ.

ಇಲ್ಲಿಯವರೆಗೆ ಯಾರು ಕಾನೂನು ಮೀರಿ ಈ ರೀತಿಯಾಗಿ ಮಾಡಿಕೊಂಡು ಬಂದಿದ್ದಾರೆಯೋ ಮತ್ತು ಇವತ್ತು ರೆವಿನ್ಯು ಸೈಟ್ ಎಂದು ಏನಿವೆ, ಇಂಥವುಗಳಿಗೆಲ್ಲಾ ಒಂದು ವಿಶೇಷವಾದಂಥ ಸ್ಕೀಂ ಅನ್ನು ತೆಗೆದುಕೊಂಡು ಬಂದು ಅವುಗಳನ್ನು ರೆಗ್ಯುಲರೈಜ್ ಮಾಡುತ್ತೇವೆಂಬ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ನಿನ್ನೆ ದಿವಸ ಮಾನ್ಯ ಶಾಸಕರು ಇದರ ಬಗ್ಗೆ ತಮ್ಮ ಭಾವನೆಗಳನ್ನು ಏನು ವ್ಯಕ್ತ ಮಾಡಿದ್ದಾರೆಯೋ ಅದರ ಬಗ್ಗೆ ಹೇಳುವುದಾದರೆ, ಈ ಕಾನೂನು ನಾಳೆ ದಿವಸ ಬಂದ ಮೇಲೆ ಗುಡಿಸಲುಗಳು ಮತ್ತು ಬಿಲ್ಡಿಂಗ್‌ಗಳನ್ನು ಒಡೆದು ಹಾಕುವಂಥದು ಮತ್ತು ರೆವಿನ್ಯು ಸೈಟ್‌ನಲ್ಲಿರತಕ್ಕಂಥ ಮನೆಗಳನ್ನು ಒಡೆದು ಹಾಕುವಂಥ ಕೆಲಸವನ್ನು ನೀವು ಮಾಡುತ್ತೀರಾ ಎಂಬ ಮಾತನ್ನು ಕೇಳಿದರು. ಈ ರೀತಿಯ ಕ್ರಮವನ್ನು ಸರ್ಕಾರ ಕೈಗೊಳ್ಳುವುದಿಲ್ಲವೆಂಬ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಭರವಸೆಯನ್ನು ಸಹ ಕೊಟ್ಟಿದ್ದಾರೆ.

ಆದರೆ, ಇವತ್ತಿನ ದಿವಸ ಯಾರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದಾರೆಯೋ, ಅವರನ್ನು ಜೈಲಿಗೆ ಕಳುಹಿಸುವಂಥ ಕಾನೂನನ್ನು ಈ ಮುಖಾಂತರ ತರುತ್ತಿದ್ದೇವೆ. ಇದರ ಬಗ್ಗೆ ಈಗಾಗಲೇ ಸ್ಪಷ್ಟೀಕರಣ ಆಗಿದೆ. ಮತ್ತೆ ಇವತ್ತಿನ ದಿವಸ ಕೃಷಿ ಭೂಮಿಗೋಸ್ಕರ ಒತ್ತುವರಿ ಮಾಡಿದ್ದಾರೆಯೋ ಅಂಥವರಿಗೆ, ಅಂದರೆ, ಬೇರೆ ಬೇರೆ ಜಿಲ್ಲೆಗಳಲ್ಲಿನ ಗೋಮಾಳ ಲ್ಯಾಂಡ್ ಅಥವಾ ಬೇರೆ ಬೇರೆ ಹಂತದ ಲ್ಯಾಂಡ್ ಇರಬಹುದು, ಬಗರ್ ಹುಕುಂ ಕಮಿಟಿ ಮುಂದೆ ಇದರ ಅರ್ಜಿಗಳು ಪೆಂಡಿಂಗ್ ಇವೆಯೋ ಅಂದರೆ, 94(a), 94 (b) ಮತ್ತು 94 (c) ಇವು ಬೇರೆ ಬೇರೆ ವಿಧಗಳಲ್ಲಿವೆ. ಇವತ್ತು ಫಾರಂ ನಂ. 53 ಪ್ರಕಾರ ಈಗಾಗಲೇ ಕೆಲವು ನಿರ್ಣಯಗಳಾಗಿವೆ. ಅರ್ಜಿದಾರರಿಂದ ಅರ್ಜಿಗಳನ್ನು ಇವತ್ತಿನ ದಿವಸ ಅಕ್ಸೆಪ್ಟ್ ಮಾಡಿದ್ದಾರೆ. ಇನ್ನೂ ಕೆಲವು ನಿರ್ಣಯಗಳ ಹಂತದಲ್ಲಿವೆ. ಇಂಥ ಲಕ್ಷಾಂತರ ಎಕರೆ ಭೂಮಿಗಳಲ್ಲಿ ರೈತರು ಇನ್ನೂ ಉಳುಮೆಯನ್ನು ಮಾಡುತ್ತಿದ್ದಾರೆ,

ಆದ್ದರಿಂದ ಅವರಿಗೆ ಏನು ಮಾಡುತ್ತೀರೆಂದು ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೇಳಿದರು. ಇದಕ್ಕೆ ನಾನು ಸ್ಪಷ್ಟೀಕರಣ ಮಾಡುತ್ತಿದ್ದೇನೆ. ಅದೇನೆಂದರೆ, ಯಾವ್ಯಾವ ಕೇಸ್‌ಗಳು ಎಲ್ಲೆಲ್ಲಿ ಪೆಂಡಿಂಗ್ ಇವೆಯೋ, ಅಂದರೆ, ಕಮಿಟಿ ಮುಂದೆ ಇರತಕ್ಕಂಥವಲ್ಲದೇ ಅಪಲೇಟ್ ಅಥಾರಿಟಿ ಮುಂದೆ ಇರತಕ್ಕಂಥದವು, ಅಂದರೆ, ಇವತ್ತಿನ ದಿವಸ ಎಲ್ಲೆಲ್ಲಿ ಕೇಸ್‌ಗಳು ಪೆಂಡಿಂಗ್ ಇವೆಯೋ ಆ ಕೇಸ್‌ಗಳ ಪ್ರಕರಣಗಳನ್ನು ನಾವು ಟಚ್ ಮಾಡುವುದಿಲ್ಲ. ಇತರೇ ಕೋರ್ಟ್‌ಗಳಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರತಕ್ಕಂಥ ಕೇಸ್‌ಗಳ ಭೂಮಿಯನ್ನು ನಾವು ಟಚ್ ಮಾಡುವುದಿಲ್ಲ. ಇವತ್ತಿನ ದಿವಸ ಸ್ಮಶಾನ ಭೂಮಿ ಮತ್ತು ಕೆರೆ ಅಂಗಳವನ್ನು ಒತ್ತುವರಿ ಮಾಡಿಕೊಂಡಿರತಕ್ಕಂಥವರ ಮೇಲೆ ನಾವು ಕರಮ ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಈ ಬಗ್ಗೆಯೂ ಕೂಡ ನಾವು ಸ್ಪಷ್ಟೀಕರಣ ಮಾಡುತ್ತೇವೆ. ಇವತ್ತಿನ ದಿವಸ ಯಾರು ಬಡ ರೈತರು ಇದ್ದಾರೆಯೊ ಅವರಿಗೂ...

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದು ನಿಮಿಷ ಯೀಲ್ಡ್ ಆಗಿ. ನೀವು ಹೇಳುತ್ತಿರುವುದು ಒಂದು ಕಡೆ. ನಾನು ಹೇಳಿರತಕ್ಕಂಥದ್ದು ತಮಗೆ ಗೊತ್ತಿದೆ. ಅದೇನೆಂದರೆ, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗಡೆ ಸಾಕಷ್ಟು ಜಮೀನುಗಳು ನೀರಾವರಿ ಜಮೀನುಗಳಾಗಿವೆ. ಒರಿಜಿನಲ್ ಡಿಕ್ಲರೇಷನ್ ಕೊಡುವಾಗ ಮೊದಲು ಅವರದು ಡ್ರೈ ಲ್ಯಾಂಡ್ ಎಂದು ಇತ್ತು. ಈಗ ಅಲ್ಲಿ ಡ್ಯಾಂ ಅಥವಾ ಕೆರೆ ಕಟ್ಟಿದ ಮೇಲೆ ಅದರ ಕೆಳಗಡೆ ಇರತಕ್ಕಂಥ ಅಚ್ಚುಕಟ್ಟು ಪ್ರದೇಶಕ್ಕೆ ಅವರದ್ದು ಸೇರಿದ ಮೇಲೆ ಅವರದ್ದು ಸುಮಾರು 60 ಎಕರೆ ಜಮೀನು ಇದ್ದರೆ ಇವತ್ತಿನ ದಿವಸ 60

ಎಕರೆ ಕೂಡ ನೀರಾವರಿ ಪ್ರದೇಶವಾಗಿರುತ್ತದೆ. ಈಗ ನ್ಯಾಚುರಲಿ ಅವರು ಡಿಕ್ಲರೇಷನ್ ಕೊಡಬೇಕಾಗಿದೆ.

ಅನೇಕ ಜನ ರೈತರು ಇದುವರೆಗೂ ಸಹ ಡಿಕ್ಲರೇಷನ್ ಕೊಟ್ಟಿಲ್ಲ. ಇದು ಮಲಪ್ರಭಾ, ಘಟಪ್ರಭಾ, ಹಾರಂಗಿ, ಹೇಮಾವತಿ ಅಣೆಕಟ್ಟಿನ ಅಚ್ಚುಕಟ್ಟು ಪ್ರದೇಶದಲ್ಲಿರಬಹುದು. ಇಂಥ ರೈತರು ಕಾನೂನುಬದ್ಧವಾಗಿ 10 ಎಕರೆಗಿಂಥ ಜಾಸ್ತಿ ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ನ್ಯಾಚುರಲಿ, ಅಲ್ಲಿ ನೀರಾವರಿಯಾದ ಮೇಲೆ ಅವರ ಹತ್ತಿರ ಎಕ್ಸಸ್ ಆಗಿ ಸುಮಾರು 30 ರಿಂದ 40 ಎಕರೆ ಜಮೀನು ಹೆಚ್ಚು ಕಡಿಮೆ ಇರುತ್ತದೆ. ಆದ್ದರಿಂದ, ಇವರಿಗೆ ಯಾವ ರೀತಿಯಾಗಿ ಟ್ರೀಟ್ ಮಾಡುತ್ತೀರಿ? ಅದನ್ನು ಆಫರ್ಸೈಸ್ ಎಂದು ಮಾಡುತ್ತೀರಾ ಅಥವಾ ಸರ್‌ಪ್ಲಸ್ ಎಂದು ಟ್ರೀಟ್ ಮಾಡಿ ಅವರಿಗೆ ಫೈನ್ ಹಾಕುತ್ತೀರಾ? ಅಥವಾ ಅವರಿಂದ ವಶಕ್ಕೆ ತೆಗೆದುಕೊಂಡು ರೀ-ಡಿಸ್ಟ್ರಿಬ್ಯೂಟ್ ಮಾಡುತ್ತೀರಾ? ಇಂಥವೆಲ್ಲಾ ಕಾಂಪ್ಲಿಕೇಷನ್ ಬರಬಾರದು ಆದ್ದರಿಂದ ಯೋಚನೆ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ಏನು ಮಾಡುತ್ತೀರೆಂಬುದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈಗ ಪ್ರಸ್ತಾಪ ಮಾಡಿರತಕ್ಕಂಥ ವಿಷಯದ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಲ್ಯಾಂಡ್ ರೆವಿನ್ಯು ಆಕ್ಟ್‌ನಲ್ಲಿ ಪ್ರಾವಿಷನ್ ಇದೆ. ಆದ್ದರಿಂದ ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಕಬಳಿಕೆ ಮಾಡಿರತಕ್ಕಂಥವರನ್ನು ಹೊರಕ್ಕೆ ಹಾಕುವುದಕ್ಕೆ ಇದರಲ್ಲಿ ಈಗಾಗಲೇ ಪ್ರಾವಿಷನ್ ಇದೆ. Section 94 (3) : "Notwithstanding anything contained in the Karnataka Public Premises (Eviction of Un-authorized Occupants) Act, the person unauthorisedly occupying any such land shall also be summarily evicted by the Deputy Commissioner and any crop including trees, raised in the land shall be liable to forfeiture." ಈ ಕಾನೂನನ್ನು ಇವತ್ತು ತಂದಿರತಕ್ಕಂಥದಲ್ಲ, ಹಿಂದಿನಿಂದಲೂ ಈ ಕಾನೂನು ಇದೆ. ಯಾರು ಅನಧಿಕೃತವಾಗಿ ಕಬಳಿಕೆ ಮಾಡಿರುತ್ತಾರೆಯೋ ಅಂಥವರನ್ನು ಹೊರ ಹಾಕುವುದಕ್ಕೆ ಡಿ.ಸಿ.ಯವರಿಗೆ ಅಧಿಕಾರ ಇದೆ. ಆದ್ದರಿಂದ ಮಾನ್ಯ ಖರ್ಗೆಯವರು ಹೇಳಿರತಕ್ಕಂಥದ್ದರ ಬಗ್ಗೆ ಹೇಳುವುದಾದರೆ, ಈ ಬಿಲ್ ಅನ್ನು ನಾವು ತರದಿದ್ದರೂ ಅವರನ್ನು ಹೊರಕ್ಕೆ ಹಾಕುವುದಕ್ಕೆ ಡಿ.ಸಿ.ಯವರಿಗೆ ಪವರ್

ಇವೆ. ಆದರೆ, ಈವರೆಗೆ ಇದ್ದಂಥ ಸರ್ಕಾರಿ ಯಾರನ್ನು ಹೊರಕ್ಕೆ ಹಾಕಿದೆ? ಆದ್ದರಿಂದ ಈ ಒಂದು ಬಿಲ್‌ನಲ್ಲಿ ನಮ್ಮ ಉದ್ದೇಶ ಬಹಳ ಮುಖ್ಯವಾಗಿದೆ.

ಇದರ ಜೊತೆಗೆ imprisonment clause ಅನ್ನು ಇದರ ಮುಖಾಂತರ ಸೇರಿಸುತ್ತಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಕೆಲವೊಂದು ಪ್ರಕರಣಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಮತ್ತು ಇಂಥ ಪ್ರಕರಣಗಳು ಎಲ್ಲೆಲ್ಲಿವೆಯೊ ಅಂಥ ಪ್ರಕರಣಗಳ ಬಗ್ಗೆ ಸರ್ಕಾರ ವಿಶೇಷವಾದಂಥ ಗಮನವನ್ನು ಹರಿಸುತ್ತದೆ. ಇವತ್ತು ಮಂಗಳೂರು ಮತ್ತು ಕೊಡಗು ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ಮತ್ತೆ ದಕ್ಷಿಣ ಕನ್ನಡ ಮತ್ತು ಉಡುಪಿ ಹಾಗೂ ಇನ್ನೂ ಕೆಲವು ಕಡೆ ಮೂಲ ಗೇಣಿಗಳಿವೆ. ಬೇರೆ ಬೇರೆ ರೀತಿಯಾದಂಥ ಪ್ರಕರಣಗಳು ಇವತ್ತಿನ ದಿವಸ ಇವೆ. ನೂರಾರು ವರ್ಷಗಳಿಂದ ಈ ಜಮೀನುಗಳಲ್ಲಿ ಉಳುಮೆ ಮಾಡಿಕೊಂಡು ಬಂದಿದ್ದಾರೆ. ಅಂಥವುಗಳನ್ನು ನಾವು ಟಚ್ ಮಾಡುವುದಿಲ್ಲವೆಂದು ನಾವು ಹೇಳಿದ್ದೇವೆ. ಬಿಲ್ ಅನ್ನು ರೀ-ಇಂಟ್ರೊಡಕ್ಷನ್ ಮಾಡಿದಾಗ ಅದಕ್ಕೆ ಒಂದು ಅಮೆಂಡ್‌ಮೆಂಟ್ ಅನ್ನು ಸಹ ತಂದಿದ್ದೇವೆ. ಅದೇನೆಂದರೆ, ಈ ರೀತಿಯಾಗಿ ನೂರಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಬರುತ್ತಿರುವಂಥವುಗಳನ್ನು ನಾವು ಟಚ್ ಮಾಡುವುದಿಲ್ಲವೆಂಬ ಬಗ್ಗೆ ಕೂಡ ಬಿಲ್ ತಂದಿದ್ದೇವೆ. ಮತ್ತೆ ಕೆಲವು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ವಿಶೇಷವಾದಂಥ ಸಭೆಗಳನ್ನು ಕರೆದು ಆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಚರ್ಚೆ ಮಾಡಿ ಅದಕ್ಕೆ ಪರಿಹಾರ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ಈಗ ಇರತಕ್ಕಂಥ ಕಾನೂನಿಗೆ ನಾವು ಶಕ್ತಿಯನ್ನು ಕೊಡುತ್ತಿದ್ದೇವೆ.

ಇವತ್ತಿನ ದಿವಸ ಇರುವ ಕಾನೂನಿನಲ್ಲಿ ಸರ್ಕಾರದ ಡಿ.ಸಿ.ಯವರಿಗೆ ಅಧಿಕಾರ ಇದೆ. ಯಾರು ಅನಧಿಕೃತವಾಗಿ ಉಳುಮೆ ಮಾಡುತ್ತಿದ್ದಾರೆಯೋ ಅಂಥವರನ್ನು ಹೊರಕ್ಕೆ ಹಾಕುವುದಕ್ಕೆ ಇವತ್ತೂ ಕೂಡ ಅಧಿಕಾರ ಇದೆ. ಆ ಕಾನೂನಿಗೆ ನಾವು ಶಕ್ತಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ, ಬಡ ರೈತರು ಮತ್ತು ತೊಂದರೆಗೆ ಒಳಗಾಗಿರುವವರಿಗೆ ಮತ್ತು ನಿಜವಾಗಿ ಬೋನಾಫೈಡ್ ಆಗಿ ಕಲ್ಟಿವೇಟ್ ಮಾಡುತ್ತಿದ್ದಾರೆಯೋ ಅಂಥವರಿಗೆ ಸರ್ಕಾರ ಯಾವುದೇ ತೊಂದರೆಯನ್ನು ಕೊಡುವುದಿಲ್ಲ. ಇವತ್ತು ನಗರದ ಸುತ್ತುಮುತ್ತಲೂ ಇರತಕ್ಕಂಥ ಭೂಮಿಯ ಬೆಲೆ ಸುಮಾರು ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಬೆಲೆ ಬಾಳುತ್ತದೆ.

ಈ ಬಿಲ್‌ಗೆ ಸಂಬಂಧಪಟ್ಟಂತೆ ನಾವು ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಿದ ಮೇಲೆ ಇವತ್ತಿನ ದಿವಸ ಯಾವ ರೀತಿಯಾದ ಒಂದು ಅವೇರ್‌ನೆಸ್ ಕ್ರಿಯೇಟ್ ಆಗಿದೆ ಎಂದರೆ, ಈ ಸದನ ಮುಂದೆ ಕೆಲವು ಅಂಕಿ-ಅಂಶಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿರುವ ಸದನ ಸಮಿತಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ರಾಮಸ್ವಾಮಿ ಮತ್ತು ಸಮಿತಿಯ ಸದಸ್ಯರೆಲ್ಲರೂ ಕೂಡಿಕೊಂಡು ಸರ್ಕಾರ ಮತ್ತು ಇಡೀ ಸಮಾಜದ ಕಣ್ಣು ತೆರೆಸುವಂಥ ಕೆಲಸವನ್ನು ಮಾಡಿದ್ದಾರೆ. ಅವರು ಮಾಹಿತಿ ಕೊಟ್ಟಮೇಲೆ ಎಷ್ಟು ಲ್ಯಾಂಡ್ ಈ ರೀತಿಯಾಗಿದೆ ಎಂಬುದರ ಬಗ್ಗೆ ಗೊತ್ತಾಗಿದೆ. ಸದನ ಸಮಿತಿ ನೀಡಿರುವ ಮಾಹಿತಿ ಪ್ರಕಾರ ನಮ್ಮ ಎಲ್ಲ ಡಿ.ಸಿ.ಗಳು ಹಾಗೂ ಸಿಬ್ಬಂದಿ ವರ್ಗದವರು ಕೆಲಸ ಕಾರ್ಯ ಮಾಡಿದ ಮೇಲೆ ನಮಗೆ ಇವತ್ತಿನ ದಿವಸ ಕಂಡು ಬಂದಿರತಕ್ಕಂಥಾದ್ದರ ಬಗ್ಗೆ ಹೇಳುವುದಾದರೆ, ಬೆಂಗಳೂರಿನ ಸುತ್ತುಮುತ್ತಲು 1,18,668 ಎಕರೆಯಷ್ಟು ಸರ್ಕಾರಿ ಜಮೀನು ಇದೆ. ಮಾನ್ಯ ರಾಮಸ್ವಾಮಿ ಸಮಿತಿಯಿಂದ ಮತ್ತು ಬೇರೆ ಬೇರೆ ಮಾಹಿತಿಗಳ ಮೂಲಕ ಈ ಜಾಗ ಫೈಂಡ್ ಔಟ್ ಆದ ಮೇಲೆ ಇವತ್ತಿನ ದಿವಸ 18,447 ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಈಗಾಗಲೇ ಮಾರ್ಚ್ 31ರೊಳಗಾಗಿ 6209...

ಶ್ರೀ ಎನ್. ಧರ್ಮಸಿಂಗ್ :- ಸದನ ಕಮಿಟಿ ಜೊತೆಯಲ್ಲಿ ತಾವು ಕೆಲವೇ ತಾಲ್ಲೂಕುಗಳಲ್ಲಿ ಮಾಡಿದ್ದೀರಿ. ಬೇರೆ ತಾಲ್ಲೂಕುಗಳನ್ನು ತಾವು ಬಿಟ್ಟಿದ್ದೀರಿ. ಎಲ್ಲಾ ಕಡೆ ಹೋಗಬೇಕು. ಅವರು ರಾಮನಗರ ತಾಲ್ಲೂಕಿಗೆ ಹೋಗಿದ್ದಾರೆಯೇ? ಎಲ್ಲಾ ಕಡೆ ಅವರು ಹೋಗಿ ಗುರುತು ಮಾಡಲಿ. ಜೇವರ್ಗಿಗೂ ಕೂಡ ಬರಲಿ.

ಶ್ರೀ ಜಗದೀಶ್ ಶೆಟ್ಟರ್ :- ಈಗ ಎಲ್ಲಾ ಕಡೆ ಮಾಡೋಣ.

ಶ್ರೀ ಎನ್. ಧರ್ಮಸಿಂಗ್ :- ನಾನು ಹೇಳುವುದೇನೆಂದರೆ, ಭೂ ಕಬಳಿಕೆ ಮಾಡಿರತಕ್ಕಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಬಿಲ್ ಇದ್ದರೆ ನಮ್ಮದೇನು ತಕರಾರು ಇಲ್ಲ. ಇವತ್ತು ಬಡ ಜನರು ಯಾರಿದ್ದಾರೆ, ಅವರಿಗೆ ಅಕ್ರಮ ಸಕ್ರಮದಲ್ಲಿ ಅರ್ಜಿ ಹಾಕಲು ಹೋಗುವುದಕ್ಕಾಗುವುದಿಲ್ಲ, ಅವರಿಗೆ ಬರೆದು ಕೊಡುವುದಕ್ಕೆ ಆಗುವುದಿಲ್ಲ, ಶಕ್ತಿ ಇಲ್ಲ, ಅಂಥವರ ಜಾಗವನ್ನು ನೆಲಸಮ ಮಾಡತಕ್ಕಂಥಾದ್ದು ಸರಿಯಾದ ರೀತಿ ಅಲ್ಲ. ನಾವು ಅಷ್ಟೇ ಹೇಳುವುದು.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಪ್ರತಿಪಕ್ಷದ ನಾಯಕರೆ, ನಾನು ಇನ್ನೊಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ

ನಾನು ಸ್ಪಷ್ಟೀಕರಣವನ್ನು ಮಾಡಿದ್ದೇವೆ. ಯಾರು ಬಡ ರೈತರು ಇದ್ದಾರೆ, ಅಂಥವರಿಗೆ ನಾವು ಯಾವ ತೊಂದರೆಯನ್ನೂ ಮಾಡುವುದಿಲ್ಲವೆನ್ನುವ ಬಗ್ಗೆ ನಾವು ಸ್ಪಷ್ಟೀಕರಣವನ್ನು ಮಾಡುತ್ತಿದ್ದೇವೆ. ಮತ್ತು ಈಗಾಗಲೇ ಈ ಅಂಕಿ ಸಂಖ್ಯೆ 18,447 ಎಕರೆ ಒತ್ತುವರಿಯಾಗಿದೆ. ಅದರಲ್ಲಿ ಈಗಾಗಲೇ ಮಾರ್ಚ್ 31 ರೊಳಗೆ 6209 ಎಕರೆಯಷ್ಟು ಜಮೀನನ್ನು ನಾವು ಸರ್ಕಾರದ ಕಬ್ಜಾಕ್ಕೆ ತೆಗೆದುಕೊಂಡಿದ್ದೇವೆ. ಸರ್ಕಾರ possession ಗೆ ತೆಗೆದುಕೊಂಡು ಅವರನ್ನು ಹೊರಗೆ ಹಾಕಿದ್ದೇವೆ. ಆಮೇಲೆ ಇಲ್ಲಿಯವರೆಗೂ ordinance ಆದ ಮೇಲೆ ನಾವು ಕೈಕಟ್ಟಿಕೊಂಡು ಕುಳಿತಿಲ್ಲ. ಈಗಾಗಲೇ ನಮ್ಮ ಅಧಿಕಾರಿಗಳು 943 ಜನರ ಮೇಲೆ case ಬುಕ್ ಮಾಡಿದ್ದಾರೆ, F.I.R. ಫೈಲ್ ಮಾಡಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ನಾನು ನಿನ್ನೆ ದಿವಸ ಅದರ ಪಟ್ಟಿಯನ್ನು ಕೇಳಿದ್ದೆ.

ಶ್ರೀ ಜಗದೀಶ್ ಶೆಟ್ಟರ್ :- ಒಂದು ನಿಮಿಷ, ಅದರ ಬಗ್ಗೆ ಕೂಡ ಹೇಳುತ್ತೇನೆ. 469 ಕೇಸ್‌ಗಳನ್ನು ಬುಕ್ ಮಾಡಿ F.I.R. ಫೈಲ್ ಮಾಡಿದ್ದೇವೆ. ಮತ್ತು 102 ಜನರನ್ನು ಅರೆಸ್ಟ್ ಮಾಡಿದ್ದೇವೆ. ಅದೇ ರೀತಿಯಾಗಿ ಅಧಿಕಾರಿಗಳ ಮೇಲೆ 20 ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಮಾನ್ಯ ಹೆಗ್ಡೆಯವರು ಆ ಹೆಸರುಗಳನ್ನು ಕೊಡಿ ಎಂದು ಕೇಳಿದರು, ಅದನ್ನು ಕೊಡುವುದಕ್ಕೆ ಹಿಂದೆ ಮುಂದೆ ಏನೂ ಇಲ್ಲ, ಅದನ್ನು ರೆಡಿ ಮಾಡುತ್ತೇನೆ, ಆ ಹೆಸರುಗಳನ್ನು ಸದನದಲ್ಲಿ ಮಂಡನೆ ಮಾಡುತ್ತೇವೆ.

ಶ್ರೀ ಎಸ್. ರಾಜೇಂದ್ರನ್ :- ಸರ್ ಒಂದು clarification. ಸ್ಮಶಾನ ಜಾಗವನ್ನು ಯಾರು occupy ಮಾಡಿರುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಸರ್ಕಾರವೇ ಸ್ಮಶಾನ ಜಾಗವನ್ನು freedom fighters ಗೆ ಕೊಟ್ಟಿದ್ದಾರೆ. ಆ D.C. ಮೇಲೆ ಕ್ರಿಮಿನಲ್ ಕೇಸ್‌ನ್ನು ಬುಕ್ ಮಾಡುತ್ತೀರಾ? ನಾನು ತಪ್ಪು ಕೇಳಿಲ್ಲ, ಇದು ಆಗಿದೆ.

ಶ್ರೀ ಜಗದೀಶ ಶೆಟ್ಟರ್ :- ಒಂದು ಸ್ಮಶಾನ ಇರುತ್ತದೆ. ಆ ಕೇಸ್ ಬಗ್ಗೆ ಸ್ಟಡಿ ಮಾಡಬೇಕು, specific ಕೇಸ್ ಇದ್ದರೆ ಕಳುಹಿಸಿ ಕೊಡಿ, ಅದರ ಬಗ್ಗೆ ಏನಾದರೂ ಇದ್ದರೆ ತನಿಖೆ ಮಾಡಿಸೋಣ.

ಶ್ರೀ ಎಸ್. ರಾಜೇಂದ್ರನ್ :- Because, it is inefficiency of the officer. ಅವರ ಮೇಲೆ ಕ್ರಿಮಿನಲ್ ಕೇಸ್ ಬುಕ್ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ :– ನಾನು ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಕಳುಹಿಸಿಕೊಡಿ, action ತೆಗೆದುಕೊಳ್ಳೋಣ.

ಅಧ್ಯಕ್ಷರು :– ಅವರು ಉತ್ತರವನ್ನು ಹೇಳಲಿ, ಆಮೇಲೆ ಕೇಳುವವರು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಮಾಧುಸ್ವಾಮಿಯವರು ಮತ್ತು ಕೆಲವರು ಹೇಳಿದರು. ಇವತ್ತು ಸರ್ವೆ ಆಗಿಲ್ಲವೆಂದು ಹೇಳಿದರು. ಬಗರ್‌ಹುಕುಂ ಕಮಿಟಿಯಲ್ಲಿ land allot ಮಾಡುವಂಥಾದ್ದು ಇರುತ್ತದೆ, ಮತ್ತೆ ಒತ್ತುವರಿ ಮಾಡಿರುವಂಥಾದ್ದು, 4–5 ಗುಂಟೆ ಜಾಸ್ತಿಯಾಗುತ್ತದೆ. ಇದನ್ನು ಸರ್ವೆ ಮಾಡಬೇಕು. ಇವತ್ತು ಬೆಂಗಳೂರು ಸುತ್ತಮುತ್ತ ಅಧಿಕಾರಿಗಳು 900 ಮಂದಿ ಮೇಲೆ ಏನು ಕೇಸ್ ಹಾಕಿದ್ದಾರೆ, ಅದರ ಬಗ್ಗೆ ನಾನು ಏನು ಮೆನ್‌ಷನ್ ಮಾಡಿದ್ದೆ, ಆ ಎಲ್ಲಾ ವ್ಯಕ್ತಿಗಳ ಮೇಲೆ ಕೇಸ್ ಹಾಕುವ ಮುಂಚೆ ನಮ್ಮ ಕಂದಾಯ ಅಧಿಕಾರಿಗಳು ಮತ್ತು ಭೂಮಾಪಕರು ಹೋಗಿ ಸರ್ವೆ ಮಾಡಿ ಇವತ್ತು ಎಷ್ಟು ಜಮೀನು ಒತ್ತುವರಿ ಬಗ್ಗೆ identify ಮಾಡಿ ಕೇಸ್ ಫೈಲ್ ಮಾಡಿದ್ದಾರೆ ಹೊರತಾಗಿ ಸರ್ವೆ ಇಲ್ಲದೆ ಮಾಡಿಲ್ಲ.

ಇವತ್ತು ಯಾರ ಮೇಲಾದರೂ ಕೇಸ್ ಫೈಲ್ ಮಾಡುವುದಾದರೆ ಸರ್ವೆ ಮಾಡಿಯೇ ಮಾಡುತ್ತೇವೆ ಎನ್ನುವುದನ್ನು ನಾನು ಹೇಳುತ್ತೇನೆ. ಯಾವುದು ಸರ್ವೆ ಇಲ್ಲದೇ ಯಾರ ಮೇಲೂ action ತೆಗೆದುಕೊಳ್ಳುವುದಿಲ್ಲ. ಹೀಗಾಗಿ ಇವತ್ತು ಏನು ನಮ್ಮ ಶಾಸಕರಲ್ಲಿ ಕೆಲವೊಂದು confusion ಗಳು ಇದ್ದವು, ಅದರ ಪ್ರಕಾರ ಇವತ್ತು ಈ ಒಂದು ಸಂದರ್ಭದಲ್ಲಿ ನಾನು ಈ ಒಂದು ವಿಶೇಷವಾದ ಒಂದು ಕಾನೂನಿನ ಮುಖಾಂತರ ಇವತ್ತು ಸರ್ಕಾರಿ ಜಮೀನುಗಳ ಒತ್ತುವರಿಯನ್ನು ಏನು ಮಾಡಿದ್ದಾರೆ, ಆ ಒತ್ತುವರಿ ಮಾಡಿದಂಥ ವ್ಯಕ್ತಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂಥ ಕೆಲಸವನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಈ ಕಾನೂನನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ಮತ್ತು ಯಾರು ಬಡ ರೈತರು ಇದ್ದಾರೆ, ಯಾರು cultivation ಮಾಡುತ್ತಿದ್ದಾರೆ, ಅವರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲವೆನ್ನುವಂಥಾದ್ದನ್ನು ಇವತ್ತು ನಾನು ಹೇಳುತ್ತಿದ್ದೇನೆ. ಮತ್ತು revenue site ನಲ್ಲಿ ಯಾರಿದ್ದಾರೆ, ಅವರಿಗೂ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ವಿಶೇಷವಾದಂಥ ಒಂದು ಕಾನೂನು ಮುಖಾಂತರ unauthorized ಇದ್ದಂಥದನ್ನು ನಾವು ಸರಿ ಮಾಡುವಂಥಾದ್ದನ್ನು, ಅದನ್ನುauthorize ಮಾಡಲು ಕೂಡ ಕಾನೂನು ತೆಗೆದುಕೊಂಡು ಬರುತ್ತೇವೆ,

ಅವರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲವೆನ್ನವಂಥಾದ್ದನ್ನು ಹೇಳುತ್ತಿದ್ದೇನೆ.

ಹೀಗಾಗಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಎಲ್ಲ ಸದಸ್ಯರು ಇದರಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ ಸಾಕಷ್ಟು ವಿಚಾರಗಳನ್ನು ಇವತ್ತು ನಮ್ಮ ಮುಂದೆ ಹೇಳಿದ್ದಾರೆ. ಇದನ್ನು ತಂದ ಮೇಲೆ ಮತ್ತೆ ಇದರ ಬಗ್ಗೆ ಏನಾದರೂ ತೊಂದರೆಯಾದರೆ, ಅದಕ್ಕೆ ಹೆಚ್ಚು ಕಡಿಮೆಯಾದರೆ ಸರ್ಕಾರ ಅದಕ್ಕೆ ಸರಿಯಾದ ರೀತಿಯಲ್ಲಿ respond ಮಾಡುವುದಕ್ಕೆ ತಯಾರು ಇದೆ. ಮತ್ತೆ ಏನಾದರೂ ತಿದ್ದುಪಡಿ ಮಾಡುವ ಪ್ರಸಂಗ ಬಂದರೆ, ಆ ತಿದ್ದುಪಡಿಯನ್ನು ನಾವು ಮಾಡುವುದಕ್ಕೆ ತಯಾರಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ.

(ಗೊಂದಲ)

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾವು ಇನ್ನೂ ಕೆಲವೊಂದನ್ನು clarification ಕೇಳಿದ್ದೇವೆ. ಅದಕ್ಕೆ ಮಾನ್ಯ ಸಚಿವರು clarification ನ್ನು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು :- ಈ ರೀತಿಯಾಗಿ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದೀರಿ. ಏನಾದರೂ ಇದ್ದರೆ ಒಂದೆರಡು ನಿಮಿಷದಲ್ಲಿ clarification ನ್ನು ಕೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ clarification ನ್ನು ಕೊಟ್ಟಿದ್ದಾರೆ. ನಾವು ಈ ಬಿಲ್‌ನ್ನು ಸ್ವಾಗತ ಮಾಡುತ್ತೇವೆ, ಯಾರು ಅಕ್ರಮವಾಗಿ ಭೂ ಕಬಳಿಕೆ ಮಾಡಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು ಎನ್ನುವುದು ಸತ್ಯ. ಈಗಾಗಲೇ ಇಡೀ ಸದನದಲ್ಲಿ ಎಲ್ಲರ ಭಾವನೆ ಏನಾಗಿದೆ ಎಂದರೆ, ಮಾನ್ಯ ಕಂದಾಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಕೆಲವು ಸೂಕ್ಷ್ಮ ವಿಚಾರಗಳು ಇವೆ. ಉದಾಹರಣೆಗೆ, ಉತ್ತರ ಕನ್ನಡ ಜಿಲ್ಲೆಯಲ್ಲಿ Canara Privilege Act ಎಂದು ಇದೆ. ಯಾವುದೋ

ಶತಮಾನದಿಂದ ನಮಗೆ ಒಂದು privilege ಎಂದು ಬಂದಿದೆ. ಕೊಡಗಿನಲ್ಲಿಯೂ ಇದೆ. ಈಗ ಬೇರೆ ಬೇರೆ ಕಡೆ ಬೇರೆ ಬೇರೆ privileges ಇದೆ. ಇದು ಆ privilege ಗೆ ಅನ್ವಯವಾಗುವುದಿಲ್ಲ ಎನ್ನುವಂಥಾದ್ದು ಇದೆ.

ಶ್ರೀ ಜಗದೀಶ್ ಶೆಟ್ಟರ್ :- ಒಂದು ನಿಮಿಷ ಕೇಳಿ, Section 79 ನಲ್ಲಿ ಈಗಾಗಲೇ ಅವರಿಗೆ protection ಇದೆ. Section 79 (2) ನಲ್ಲಿ

"Notwithstanding anything contained in sub-section (1) but subject to such general or special orders that may be issued by the State Government from time to time, the privileges that are being enjoyed either by custom or under any order such as privileges in respect of Kumki lands, Bane lands and Kane lands in South Kanara District, Betta lands and Hadi lands in North Kanara District, Kan and Soppina Betta lands in Mysore area, Jamma and Bane in Coorg District and Motasthal wet lands in Hyderabad area shall continue."

ಅಂದರೆ ನಮ್ಮ Land Revenue Act ನಲ್ಲಿ protection ಇದೆ. ಹೀಗಾಗಿ ಇದನ್ನು ನಮಗೆ ಟಚ್ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ನಮ್ಮ ಶಾಸಕರಲ್ಲಿ ಇದರ ಬಗ್ಗೆ ಕೆಲವೊಂದು ಸಂಶಯಗಳು ಇವೆ. ಆ ಸಂಶಯದ ಬಗ್ಗೆ ಯಾರು ಏನೂ ತಿಳಿದುಕೊಳ್ಳುವಂಥಾದ್ದು ಇಲ್ಲ, ಅದಕ್ಕೆ protection ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಗೊಂದಲ)

ಡಾ|| ಶರಣಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಕೆಲವೊಂದು specific ಆಗಿರುವ clarification ಗಳನ್ನು ಕೇಳಿದ್ದೆ. ಕೇಂದ್ರ ಸರ್ಕಾರ SEZ ಬಗ್ಗೆ ಈಗ ರಾಜ್ಯ ಸರ್ಕಾರಗಳಿಗೆ ಭೂಸ್ವಾಧೀನದ ಬಗ್ಗೆ...

ಶ್ರೀ ಜಗದೀಶ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ರಿಪೀಟ್ ಆಗುವುದು ಬೇಡ. ತಾವು SEZ ಬಗ್ಗೆ Industrial area ಗೆ conversion ಬಗ್ಗೆ ಎಲ್ಲವನ್ನೂ ಹೇಳಿದಿರಿ. ಒಂದು ಕಾನೂನಿನಲ್ಲಿ ಅವಕಾಶ ಇದೆ. ಇವತ್ತು ಕೃಷಿ

ಭೂಮಿಯನ್ನು ಕೃಷಯೇತರ ಉದ್ದೇಶದ ಸಲುವಾಗಿ ಉಪಯೋಗ ಮಾಡಲಿಕ್ಕೆ ಅದಕ್ಕೇನೂ ban ಇಲ್ಲ. Authority ಇವೆ, ಪ್ರಾಧಿಕಾರ ಇವೆ. ಅಲ್ಲಿ apply ಮಾಡಿದರೆ, ಆ ಕೃಷಿ ಭೂಮಿಯನ್ನು Industry purposeಗೆ ಉಪಯೋಗ ಮಾಡಬಹುದು, ಮತ್ತು residential purpose ಗೆ ಉಪಯೋಗ ಮಾಡಬಹುದು. ಆದರೆ permission ತೆಗೆದುಕೊಳ್ಳಬೇಕು ಅಷ್ಟೇ. ಹೀಗಾಗಿ ಯಾವುದೇ ತೊಂದರೆ ಇಲ್ಲ. ಆದ್ದರಿಂದ ಕೃಷಿ ಭೂಮಿಯನ್ನು convert ಮಾಡಲಿಕ್ಕೆ application ಕೊಡಬೇಕು ಅಷ್ಟೆ. ಈಗ SEZ ಬಂತು, ಇವತ್ತು KIADB ಮುಖಾಂತರ ಜಮೀನು acquisition ಆದರೆ automatically convert ಆಗುತ್ತದೆ. ಇದರ ಬಗ್ಗೆ ಸಂಶಯುಪಡುವ ಪ್ರಶ್ನೆ ಬರುವುದಿಲ್ಲ. ಅಂತಹವರಿಗೆ ಇದರಲ್ಲಿ punishment ಬರುವುದಿಲ್ಲ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಸ್ವಲ್ಪ ತಾವು ಗಮನವನ್ನು ಕೊಟ್ಟು ಕೇಳಬೇಕು. ಏಕೆಂದರೆ, ನಾನು ರೈತರ ಹಿತದೃಷ್ಟಿಯಿಂದ ಈ ಮಾತನ್ನು ಆಡುತ್ತಿದ್ದೇನೆ. ಇವತ್ತು ಕೇಂದ್ರ ಸರ್ಕಾರ ಇನ್ನು ಮುಂದೆ SEZ ನಲ್ಲಿ ರಾಜ್ಯ ಸರ್ಕಾರಗಳು land acquisition ಅನ್ನು KIADB ಯಿಂದ ಹೊರಗೆ ಇಡುತ್ತೇವೆ, ನೀವು ನೇರವಾಗಿ Industrialist ರೈತರ ಭೂಮಿಯನ್ನು purchase ಮಾಡಬೇಕು ಎನ್ನುವಂಥ ಕಾಯಿದೆಯನ್ನು ತರುವವರು ಇದ್ದಾರೆ. ಅದರ ಬಗ್ಗೆ ಅವರು ಮಾರ್ಗಸೂಚಿಯನ್ನು ಕೊಡುವವರು ಇದ್ದಾರೆ. ಅಂತಹ ಸಂದರ್ಭದಲ್ಲಿ ನೀವು ಹೇಳಿದ ಪ್ರಕಾರ ರೈತರು ಒಂದು ವೇಳೆ ಆ land ಅನ್ನು industrial purposeಗೆ convert ಮಾಡಿ ಮಾರಾಟ ಮಾಡಬೇಕಾದರೆ ರೈತರಿಗೆ ಬಹಳ ಹೊರೆಬೀಳುತ್ತದೆ. ಅದಕ್ಕೊಂದು ನೀವು exemption ಕೊಡಿ ಎಂದು ನಾನು request ಮಾಡಿದೆ.

ಇನ್ನೊಂದು clarification ನ್ನು ನಾನು ಕೇಳಿದ್ದೆ. 192ಬಿ, ಇದರಲ್ಲಿ ತಾವೇನು ಬಿಲ್ ತಂದಿದ್ದೀರಿ, 192ಬಿ ಯಲ್ಲಿ abetment ಎನ್ನುವ ಬಗ್ಗೆ clear cut clarification ಕೊಟ್ಟಿಲ್ಲ. It will become an instrument to settle political scores. ಇವತ್ತು ನೀವು ಸರ್ಕಾರದಲ್ಲಿ ಇರಬಹುದು, ನಾಳೆ ಬೇರೆ ಯಾರಾದರೂ ಇರಬಹುದು. ಆದರೆ ಒಂದು ವೇಗ್ ಆಗಿರತಕ್ಕಂಥ ಪದವನ್ನು ತಾವು ಬಳಸಿದ್ದೀರಿ. 192ಬಿ ಅನ್ನು ತಾವು ದಯವಿಟ್ಟು ಕೈಬಿಡಬೇಕು. ಇದೊಂದು ಬಹಳ ಪ್ರಮುಖವಾಗಿರತಕ್ಕಂಥ ಬಿಲ್ ಇದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು

ಕಂದಾಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಬಡವರ ಬಗ್ಗೆ ನಾವು ಕೈಮುಟ್ಟುವುದಿಲ್ಲ ಎಂದು. ಆದರೆ ಒಂದು ಕಾನೂನು ಆದ ಮೇಲೆ ಕೇವಲ ಮಾನ್ಯ ಮುಖ್ಯಮಂತ್ರಿಗಳ ಆಶ್ವಾಸನೆ ಮೇಲೆ ರಾಜ್ಯವನ್ನು ಇವತ್ತು ನಡೆಸುವುದಕ್ಕಾಗುವುದಿಲ್ಲ. It will become the law of the land. ನಾಳೆ ಯಾರಾದರೂ ಕೋರ್ಟಿಗೆ ಹೋದರೆ ನೀವು ಅದಕ್ಕೆ ಇಲ್ಲವೆಂದು ಅನ್ನುವುದಕ್ಕಾಗುದಿಲ್ಲ. ಅದಕ್ಕಾಗಿ ನೀವು ಬಡವರಿಗೆ ಒಂದು ವೇಳೆ ರಕ್ಷಣೆ ಮಾಡಬೇಕಾಗಿದ್ದರೆ, bring appropriate amendments to this Bill.

ಅಧ್ಯಕ್ಷರು :- ನಿನ್ನೆ ದಿನ ತಾವು ಪ್ರಸ್ತಾಪ ಮಾಡಿದ್ದೀರಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- You should bring an amendment in this Bill itself.

ಅಧ್ಯಕ್ಷರು :- Clarification ಇದ್ದರೆ ಕೇಳಿ ಮಾನ್ಯ ಪಾಟೀಲ್‌ರವರೆ,

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಅದಕ್ಕಾಗಿ ನಾನು clarification ಕೇಳುತ್ತಿದ್ದೇನೆ. ಈ ರೀತಿಯಾಗಿರುವುದನ್ನು ತಾವು ಒಪ್ಪುತ್ತೀರಾ? ಇವತ್ತು ಮಾನ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಹೇಳಿದ ಮೇಲೆ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ :- ನಾನು ಈಗಾಗಲೇ ಸಾಕಷ್ಟು ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು SEZ ಬಗ್ಗೆ ಹೇಳಿದರು. ಅದು Specific Act, ಅದು ಕೇಂದ್ರ ಸರ್ಕಾರದ ಕಾನೂನು ಆಗಿರುವುದರಿಂದ, ನಾಳೆ ದಿವಸ ಕೇಂದ್ರ ಸರ್ಕಾರದವರು permission ಕೊಟ್ಟಲ್ಲಿ ಅವರುಗಳು ರೈತರ ಕಡೆ ಏತಕ್ಕೆ ಬರುತ್ತಾರೆ. ಇವೆಲ್ಲಾ ಸಂಶಯಗಳ ಅವಶ್ಯಕತೆ ಇಲ್ಲ. ಇವತ್ತು ಇದರ ಮುಖಾಂತರ ನಮ್ಮ ಕರ್ನಾಟಕದಲ್ಲಿ ಇವತ್ತು ಸರ್ಕಾರಿ ಭೂಮಿ ಒತ್ತುವರಿ ಮಾಡುವವರಿಗೆ ಏನು ಕಾನೂನಿನ ಪ್ರಕಾರ ಶಿಕ್ಷೆ ಕೊಡುವಂತಹದ್ದು ಇದೆ. ದಯವಿಟ್ಟು ಇದು ಒಂದು ಹೊಸದಾದ ದಿಟ್ಟವಾದ ನಿರ್ಧಾರವಾಗಿದೆ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ಒಂದು ಕಾನೂನಿನ ಈ ಬಿಲ್ಲನ್ನು ಇವತ್ತು ಪರ್ಯಾಲೋಚನೆ ಮಾಡುವ ಬಗ್ಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇದನ್ನು ಪಾಸು ಮಾಡಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ.,

ಅಧ್ಯಕ್ಷರು :- ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಕಾರಣದಿಂದ ಮತ್ತೆ ಮತ್ತೆ ನೀವುಗಳು ಸುಮ್ಮನೆ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಅದಕ್ಕೋಸ್ಕರ ಇದನ್ನು ನಾನು ಮತಕ್ಕೆ ಹಾಕುತ್ತೇನೆ. ಮತ್ತೆ ಮತ್ತೆ ನೀವುಗಳು ಮಾತನಾಡುವುದಾದರೆ ಹೇಗೆ? ಇದರಲ್ಲಿ ಮತ್ತೇ ಪ್ರಶ್ನೆ ಮಾಡುವುದು ಏನಿದೆ? clarification ಇದ್ದರೆ ಕೇಳಬೇಕು. ಅದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಇನ್ನೂ ತೃಪ್ತಿಕರವಾಗಿ ಉತ್ತರವನ್ನು ಕೊಡುವುದಕ್ಕಾಗುತ್ತದೆಯೇ? ನಿನ್ನೆ ದಿನ ಈ ಬಗ್ಗೆ ಎಷ್ಟು ಗಂಟೆಗಳ ಕಾಲ ಚರ್ಚೆಯಾಗಿದೆ. ಈಗಲೂ ಸಹ ಮಾತನಾಡಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧಪಕ್ಷದ ನಾಯಕರು) :- ಈ ಬಗ್ಗೆ ಶರಣ ಪ್ರಕಾಶ್ ಮತ್ತು ಕೃಷ್ಣಭೈರೇಗೌಡರು ಕೇಳುತ್ತಾರೆ.

ಅಧ್ಯಕ್ಷರು :- ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರದು ಆಯಿತಲ್ಲಾ?

ಶ್ರೀ ಎನ್. ಧರ್ಮಸಿಂಗ್ :- ಇನ್ನೂ ಆಗಿಲ್ಲ. ಬಿಲ್ಲನ್ನು ಪಾಸು ಮಾಡುವಂತಹ ಕಾಲದಲ್ಲಿ ಸಮಗ್ರವಾದ ಚರ್ಚೆಯಾಗಬೇಕು.

ಅಧ್ಯಕ್ಷರು :- ಅವರಿಗೆ ತೃಪ್ತಿಕರವಾಗಿ ಉತ್ತರವನ್ನು ಇವರು ಕೊಡುವುದಕ್ಕಾಗುತ್ತದೆಯೇ? ಆಯಿತು, ಮಾನ್ಯ ಕೃಷ್ಣಭೈರೇಗೌಡರೆ ತಾವು ಮಾತನಾಡಿ.

ಶ್ರೀ ಕೃಷ್ಣಭೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು oral ಆಗಿ assurance-ನ್ನು ಕೊಟ್ಟರೆ ಅದು ಕಾನೂನಾಗುತ್ತದೆಯೇ? ಡಾ॥ ಶರಣ ಪ್ರಕಾಶ್‌ರವರು ಏನು ಕೇಳಿದ್ದಾರೆಂದರೆ, ಅದು ಬಹಳ ಮುಖ್ಯವಾಗಿದೆ. ನೀವು ಈ ಬಗ್ಗೆ ಮತ್ತೇ ತಿದ್ದುಪಡಿಯನ್ನು ತರುತ್ತೀರೆಂದರೆ, ಇಂತಹ ಕಾನೂನುಗಳನ್ನು ಮಾಡುವುದಕ್ಕಾ ನಾವು ಇಲ್ಲಿಗೆ ಬಂದಿರುವುದು? ಒಂದು ಸಾರಿ ಕಾನೂನನ್ನು ಮಾಡಿದ ಮೇಲೆ ಅದು ಸಮಗ್ರವಾದ ಇರಬೇಕೋ ಅಥವಾ ಬೇಡವೋ? ನಾಳೆ ಮತ್ತೆ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿ ಸೃಷ್ಟಿ ಹುಟ್ಟಿಸುವುದಕ್ಕಿಂತ ಮುಂಚೆಯೇ ನಾವು ಅದನ್ನು ಹೇಳಿದರೆ ಅದಕ್ಕೆ ಅರ್ಥವೇನು? ಈ ಕಾನೂನಿಗೆ ಗಂಭೀರತೆ ಬೇಡವೇ? ಈ ಕಾನೂನು ಗೊಂದಲಗಳ ಗೂಡು ಆಗಬಾರದು ಎಂದು ನಮ್ಮ ಉದ್ದೇಶ. ನಾವು ಎರಡು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಯಾರೂ-ಬಡವರು unauthorised cultivation ಮಾಡಿಕೊಂಡಿದ್ದಾರೆ, ಬಡವರು, ರೈತರು ಮತ್ತು ಕೃಷಿಕರು ಅವರಿಗೆ exemption ಅರ್ಜಿಗಳನ್ನೇ ಹಾಕಿಕೊಂಡಿರುವುದಿಲ್ಲ. ಅವರುಗಳು 30 ವರ್ಷಗಳಿಂದ ಸಾಗುವಳಿಯನ್ನು

ಮಾಡುತ್ತಿದ್ದಾರೆ. ಅವರ ಪಾಡು ಏನು? ಅವರನ್ನು ಬಿಡುತ್ತೇವೆಂದು ಮೌಖಿಕವಾಗಿ ಹೇಳಿದ್ದಾರೆ. ಮೌಖಿಕ assurance ಮೇಲೆ ಕಾನೂನು ಮಾಡುವುದಕ್ಕಾಗುತ್ತದೆಯೇ? ನಾಳೆ ಅವರಿಗೆ ನೀವು exemption ಕೊಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು :– ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಕಾನೂನನ್ನು ಯಾರು ಕೇಳುತ್ತಾರೆ? ನಾಳೆ ದಿನ ಅದನ್ನು ಯಾರು ಕೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ತಾವುಗಳೆಲ್ಲರೂ ಕುಳಿತುಕೊಳ್ಳಿ, ನಾನು ಅವರಿಗೆ ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಕೇಳುತ್ತಿದ್ದಾರೆ ನೀವೆಲ್ಲರೂ ಏತಕ್ಕೆ ನಿಂತಿದ್ದೀರಿ? ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ ಆಗುತ್ತದೆ? ಅವರು ಏನು ಕೇಳುತ್ತಿದ್ದಾರೆಂದು ಅವರಿಗೆ ಅರ್ಥವಾಗುವುದಿಲ್ಲ.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಸೆಕ್ಷನ್ 192 (ಬಿ) ಬಗ್ಗೆ ಏನೂ ಹೇಳಿರುವುದಿಲ್ಲ.

ಅಧ್ಯಕ್ಷರು :– ಮಾನ್ಯ ಕೃಷ್ಣಭೈರೇಗೌಡರು ಹೇಳಿರುಬ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಈಗಾಗಲೆ,.....

ಶ್ರೀ ಕೃಷ್ಣಭೈರೇಗೌಡ :– ನಾವು ಅದನ್ನು ನೋಡಿಕೊಂಡು ಸರ್ವೆ ಮಾಡುತ್ತೇವೆಂದು ಹೇಳಿದರೆ ಅವರನ್ನು ತೆಗೆಯುವುದಕ್ಕೆ ಅವಕಾಶ ಇರುತ್ತದೆ, ಅವರನ್ನು prosecute ಮಾಡುವುದಕ್ಕೆ ಅವಕಾಶ ಇರುತ್ತದೆ. ಅಂತಹ discretion ನ್ನು create ಮಾಡಬೇಡಿ. ಕಾನೂನು ಮಾಡಿದರೆ ಅದು ಸ್ಪಷ್ಟವಾಗಿರಬೇಕು. ಅದು ಮೊಣಚಾಗಿರಬೇಕು, ಅಷ್ಟೆ ನಮ್ಮ ಉದ್ದೇಶ. ಈ ಉದ್ದೇಶ ಈಡೇರಬೇಕೆಂದು ನಮ್ಮ ಆಸೆ. ತಾವು ಮೊಣಚಾಗಿ ಕಾನೂನನ್ನು ರಚನೆ ಮಾಡಬೇಕು. ಗೊಂದಲಗಳ ಗೂಡು ಇರುವಂತಹ ಕಾನೂನನ್ನು ತಾವು ದಯವಿಟ್ಟು ತರಬೇಡಿ. ನಾವುಗಳು ದಯಮಾಡಿ ತಮ್ಮನ್ನು ಕೇಳಿಕೊಳ್ಳುತ್ತೇವೆ. ನಿಮ್ಮ ಉದ್ದೇಶ ಏನು ಇದೆ, ಅದು ಸಫಲವಾಗಬೇಕು, ಯಾರು ಜಮೀನನ್ನು ಭೂಕಬಳಿಕೆ ಮಾಡಿದ್ದಾರೆ, ಅವರಿಗೆ ದಂಡವನ್ನು ಹಾಕಬೇಕು. ಆ ಉದ್ದೇಶದಿಂದ

ನಾವುಗಳು ಪದೇ ಪದೇ ಒತ್ತಾಯ ಮಾಡಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇವೆ. ಮೊಣಚಾಗಿರುವಂತಹ ಸ್ಪಷ್ಟವಾಗಿರುವಂತಹ ಕಾನೂನನ್ನು ತಾವು ಮಾಡಬೇಕು. ನಾಳೆ ದಿನ ತಿದ್ದುಪಡಿ ಮಾಡುವಂತಹ ಮಾತು ಬರುವುದು ಬೇಡ. ದಯವಿಟ್ಟು ಅದನ್ನು ಮಾಡಿ ಎಂದು ನಮ್ಮ ಒತ್ತಾಯವಾಗಿದೆ.

ಅಧ್ಯಕ್ಷರು :- ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- ನಾನು ಈಗಾಗಲೇ ನಮ್ಮ ಬಿಲ್ಲಿನಲ್ಲಿ ಸ್ಪಷ್ಟೀಕರಣವನ್ನು ಮಾಡಿದ್ದೇನೆ. ಇವತ್ತು ಏನು ಒತ್ತುವರಿ ಜಮೀನುಗಳ ಬಗ್ಗೆ ಕಮಿಟಿಗಳ ಮುಂದೆ ಪೆಂಡಿಂಗ್ ಇದೆ. ಮತ್ತು Appellate Tribunal ಮುಂದೆ ಅದು ಪೆಂಡಿಂಗ್ ಇದೆ. ಸರ್ಕಾರಿ ಭೂಮಿಗಳ ಅಧಿನಿಯಮ 94 (ಎ), 94 (ಬಿ) 94 (ಸಿ) ಪ್ರಕರಣ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. ಈ ಬಗ್ಗೆ ನಾವು ಸ್ಪಷ್ಟೀಕರಣವನ್ನು ಮಾಡಿದ್ದೇವೆ. ಮತ್ತು ಅದನ್ನು ಕೂಡ ನಾವು ಸ್ಪಷ್ಟ ಮಾಡಿದ್ದೇನೆ.

ಇವತ್ತು Appellate Tribunal pending ಅಂದರೆ ಎಲ್ಲಾ before Appellate Authority ಎಲ್ಲೆಲ್ಲಿ ಇದೆಯೋ ಇದರ ಬಗೆ ಯಾವುದೂ ಇದರಲ್ಲಿ ಇಲ್ಲ. ಇನ್ನೊಂದು ಪ್ರಶ್ನೆಯೊಂದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣವನ್ನು ಮಾಡಿದರು.

ಇವತ್ತು ನಾವು ರೆವಿನ್ಯೂ ಸೈಟ್ ಎಂದು ಕರೆಯುತ್ತೇವಲ್ಲಾ ಅದರ ಬಗ್ಗೆ ಏನು ಒಂದು ಹೆದರಿಕೆ ಇದೆ ಎಂಬುದರ ಬಗ್ಗೆ ಮಾನ್ಯ ಶಾಸಕರುಗಳು ಭಾವನೆಯನ್ನು ವ್ಯಕ್ತಪಡಿಸಿದರು... ಬಿಲ್ಲಿನಲ್ಲಿ ಅದರ ಬಗ್ಗೆ ನಾವು mention ಮಾಡಿದ್ದೇವೆ. ಈ 7ನೇ ಕಲಂನಲ್ಲಿ ಪರಂತು, ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿ ಪ್ರಕರಣಗಳಿಗೆಇದು ಅನ್ವಯವಾಗತಕ್ಕದ್ದಲ್ಲ. ಈ ಸ್ಪಷ್ಟೀಕರಣವನ್ನು ನಾವು ಕೊಟ್ಟಿದ್ದೇವೆ.

ಶ್ರೀ ಸಿ.ಟಿ. ರವಿ :- ಮಾನ್ಯ ಅಧ್ಯಕ್ಷರೆ, ಚಿಕ್ಕಮಂಗಳೂರಿನಲ್ಲಿ 30-40 ವರ್ಷಗಳಿಂದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಇದರಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಹಾಗೂ ನಾವು ಕೂಡ ಹೇಳಿದ್ದೇವೆ. ತಾವು ಈ ಬಿಲ್ಲಿಗೆ ಅನುಮೋದನೆಯನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಸಿ.ಟಿ. ರವಿ :– ಚಿಕ್ಕಮಗಳೂರದ್ದು special case ಇದೆ. ನೀವು ಕಲಂ 60ರ ಅಡಿಯಲ್ಲಿ ಹಾಕಿಲ್ಲ. ಕಲಂ 53ರ ಪ್ರಕಾರ ಅರ್ಜಿಯನ್ನು ಹಾಕಿಲ್ಲ, ನೀವು ಯಾವುದಕ್ಕೂ ಕೂಡ ಚಿಕ್ಕಮಗಳೂರಿನಲ್ಲಿ ಅರ್ಜಿಯನ್ನು ಹಾಕಿರುವುದಿಲ್ಲ. ಅಲ್ಲಿ ನೂರಾರು ಎಕರೆ ಕಾಫಿ ತೋಟವನ್ನು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ? ನಾಳೆ ದಿವಸ ಅವರನ್ನು ಜೈಲಿಗೆ ಕಳುಹಿಸುತ್ತೀರಾ? ನೀವು ಕೊಡಗಿಗೆ....

(ಗೊಂದಲ)

ಅಧ್ಯಕ್ಷರು :– ಈಗ ಇದರ ಬಗ್ಗೆ ವಿವರವಾಗಿ ಚರ್ಚೆಯಾಗಿದೆ. ಕೆಲವರು clarification ಕೇಳಿದ್ದಾರೆ. ಏನೆಂದರೆ ಎಲ್ಲರೂ ನಿಂತುಕೊಂಡು ಅವರವರ clarification ಅವರವರ ಭಾವನೆಗಳನ್ನು ಕೇಳುತ್ತಾ ಹೋದರೆ ಅದಕ್ಕೆ ಸಮಯವಿಲ್ಲ. ಆದ್ದರಿಂದ ಇದನ್ನು ಮತಕ್ಕೆ ಹಾಕುತ್ತೇನೆ, ದಯಮಾಡಿ ಸಹಕರಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ :– ಹಳ್ಳಿಗಳಲ್ಲಿ ನಾಳೆ ದಿನ ನಾವುಗಳು ಓಡಾಡುವುದಕ್ಕಾಗುವುದಿಲ್ಲ. ನೀವು ಭಸ್ಮಾಸುರನಿಗೆ ವರವನ್ನು ಕೊಟ್ಟು ಆಮೇಲೆ ಮತ್ತೇ ಮೋಹಿನಿಯನ್ನು ಹುಡುಕಿಕೊಂಡು ಬರಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಕೂಡ ಈ ಕಾನೂನು ಬೇಡ. ಇದು ತಮಾಷೆಯ ಮಾತಲ್ಲ. ಒಂದು ಸಲ ಭಸ್ಮಾಸುರನಿಗೆ ವರವನ್ನು ಕೊಟ್ಟಮೇಲೆ ಆಮೇಲೆ ತಲೆ ತಪ್ಪಿಸಿಕೊಂಡು ಓಡಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :– ಅಲ್ಲಿಯ ಸಮಸ್ಯೆಯ ಬಗ್ಗೆ ನಾನು ಪ್ರತ್ಯೇಕವಾದ ಸಭೆಯನ್ನು ಕರೆಯುತ್ತೇನೆ.

ಶ್ರೀ ಸಿ.ಟಿ. ರವಿ :– ಆ ಬಿಲ್ಲಿನಲ್ಲಿ ಮೊದಲು ಅದನ್ನು ಕಾಣಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :– ಈಗಾಗಲೇ ನಾನು ಈ ಸದನದಲ್ಲಿ ಹೇಳಿದ್ದೇನೆ.

ಅಧ್ಯಕ್ಷರು :– ಒಬ್ಬೊಬ್ಬರಾಗಿ ತಾವುಗಳು ಮಾತನಾಡಿ. ಎಲ್ಲರೂ ಒಟ್ಟಿಗೆ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ :- ನಾವು ಸ್ಪಷ್ಟೀಕರಣವನ್ನು ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಸಿ.ಟಿ. ರವಿ :- ಇದರಲ್ಲಿ ಮೊದಲು ಅದನ್ನು ಕಾಣಿಸಬೇಕು. ಈಗಾಗಲೇ ಕಾಫಿ ತೋಟವನ್ನು ಹಂಚಿ, ಕಾಫಿ ತೋಟದ ಮಾಲೀಕರನ್ನು ಸುಳ್ಳು atrocity case ಹಾಕಿ ಜೈಲಿಗೆ ಕಳುಹಿಸಿದ್ದಾರೆ. ನಾಳೆ ದಿವಸ ಎಲ್ಲಾ ಕಡೆಗಳಲ್ಲೂ ಇದನ್ನೇ ಮಾಡುತ್ತಾರೆ. ನೀವು ಅಧಿಕಾರಿಗಳನ್ನು ಪೂರ್ತಿಯಾಗಿ ನಂಬಬೇಡಿ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) :- ಯಾವ ಯಾವ ಸಕ್ರಮ ಮಾಡುವುದಕ್ಕೆ unauthorised ಆಗಿ ಜಮೀನನ್ನು ಅನುಭವಿಸುತ್ತಿದ್ದಾರೆ, ಅವುಗಳನ್ನು ರೈತರುಗಳು ನಿಜವಾಗಿಯೂ ಅನುಭವಿಸುತ್ತಿದ್ದಾರೆ. ಜಮೀನುಗಳಲ್ಲಿ ವ್ಯವಸಾಯವನ್ನು ಮಾಡಿಕೊಂಡು ಅನುಭವಿಸುವಂತಹವರು, ಅವರದು ಯಾವ ಅರ್ಜಿಗಳು ಪೆಂಡಿಂಗ್ ಇದೆ, ಇತ್ಯರ್ಥವಾಗಿಲ್ಲ ಅವುಗಳನ್ನೆಲ್ಲಾ ಇದರಲ್ಲಿ ಬರುತ್ತದೆಂದು ಹೇಳುತ್ತೀರಿ. ಕೆಲವರು ಅರ್ಜಿಗಳನ್ನೆ ಹಾಕಿರುವುದಿಲ್ಲ. ಇದು ಒಂದು ಭಾಗವಾಗಿರುತ್ತದೆ, ಇನ್ನೊಂದು ಮೈಸೂರು, ಬೇರೆ ಬೇರೆ ಪಟ್ಟಣಗಳಲ್ಲಿ ಬೆಂಗಳೂರು ಸುತ್ತ ಮೈಸೂರಿನಿಂದ 15 ಕಿ.ಮೀ ಒಳಗಡೆ ಇರುವಂತಹ ಜಮೀನುಗಳಲ್ಲಿ ಕೆಲವರು unauthorised ಆಗಿ cultivate ಮಾಡುತ್ತಾರೆ. ಅವರದು ಸಕ್ರಮ ಮಾಡುವುದಕ್ಕೆ ಬರುವುದಿಲ್ಲ.

ಬೆಂಗಳೂರಿನಲ್ಲಿ 10 ಕಿ.ಮೀ ಎಂದು ಹೇಳಿದ್ದಾರೆ. ಮೈಸೂರಿನಲ್ಲಿ 15 ಕಿ.ಮೀವರೆಗೆ ಯಾರ್‍ಯಾರು unauthorised ಆಗಿ occupy ಮಾಡಿಕೊಂಡು ಅದನ್ನು cultivate ಮಾಡಿಕೊಂಡು ಹೋಗುತ್ತಿದ್ದಾರೆ. ಅಂತಹವರಿಗೆಲ್ಲಾ ಸಕ್ರಮ ಮಾಡಿಕೊಟ್ಟಿದ್ದೇವೆ. ಬೇರೆಯವರ ಜಮೀನನ್ನು ಹೊಡೆದುಕೊಂಡು ಅದನ್ನು real estate ಮಾಡಿ ಮಾರಾಟ ಮಾಡಿ ದುಡ್ಡನ್ನು ಮಾಡಿಕೊಳ್ಳುವವರು ಒಂದು ಭಾಗವಾದರೆ, ನಿಜವಾಗಿ 25 ರಿಂದ 40 ವರ್ಷಗಳ ಕಾಲ ಕೆಲವರು ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಮೈಸೂರು ಸುತ್ತ ಸಾಲುಂಡಿ. ದಡದಹಳ್ಳಿ, ಅನೇಕ ಅಕ್ಕಪಕ್ಕದ ಊರುಗಳಲ್ಲಿ ಅವರುಗಳೆಲ್ಲರೂ ಇದ್ದಾರೆ. ನಾವು ಅವರಿಗೆ ಹೇಳದೇ ಡಿ.ಸಿ.ಯವರಿಗೆ ಹೇಳಿದೆ, ಅವರು ಇಲ್ಲಾ ಸಾರ್ 15 ಕಿ.ಮೀ ಅದೆಲ್ಲ ಇದೆ, ಆದ್ದರಿಂದ ನಾವು ಅದನ್ನು ಸಕ್ರಮ ಮಾಡುವುದಕ್ಕೆ ಬರುವುದಿಲ್ಲ. ಅವರು ಅರ್ಜಿಯನ್ನು ಹಾಕಿದರೂ ಕೂಡ ನಾವು ಅವರ application ಗಳನ್ನು reject ಮಾಡುತ್ತೇವೆಂದು ಹೇಳುತ್ತಾರೆ.

ಬೇರೆ ಬೇರೆ ಕಾರಣಗಳಿಂದ ಪಾಪ ಅವರ ಜಮೀನುಗಳು ಅಕ್ವೈರ್ ಆಗುತ್ತಲೇ ಇರುತ್ತದೆ, KIADB ಯವರು MUDA ದಲ್ಲಿ ಬೇರೆ ಬೇರೆ ಅಕ್ವೈರ್ ಆಗುತ್ತಿರುತ್ತದೆ. ಅವರಿಗೆ ಹಕ್ಕುಪತ್ರಗಳು ಸಹ ಇಲ್ಲದಿರುವುದರಿಂದ ಅವರು ಹಕ್ಕುದಾರರಾಗುವುದಿಲ್ಲ. ಅವರು 30 ರಿಂದ 50 ವರ್ಷಗಳು ಇರುವ ಬಗ್ಗೆ ಅವರಿಗೆ ಪರಿಹಾರವನ್ನು ಸಹ ಕೊಡುವುದಕ್ಕೆ ಬರುವುದಿಲ್ಲ. ಬಿಕಾಸ್ ಅವರನ್ನು ಓನರ್ ಎಂದು ಮಾಡುವುದಕ್ಕೆ ಬರುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ ಇಂತಹವರಿಗೆಲ್ಲಾ ತೊಂದರೆಯಾಗುತ್ತದೆ. ಆ ಕಾರಣದಿಂದಲೇ ನಾವು ಸಜೆಸ್ಟ್ ಮಾಡಿರುವುದು, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಮಾಡಿ, ಯಾವುದೇ ಕಾನೂನಿನಲ್ಲಿ ambiguity ಇರಬಾರದು. Ambiguity ಇದ್ದರೆ ನೀವು ಆ ಬಗ್ಗೆ ಭರವಸೆಯನ್ನು ಕೊಡಬಹುದು. ನಾನು ಈ ಭರವಸೆಯನ್ನು ಕೊಟ್ಟಿದ್ದೇನೆ. ಕಾನೂನಿನಲ್ಲಿ ಭರವಸೆಗಳು ನಿಲ್ಲುವುದಿಲ್ಲ, ಕಾನೂನುಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಕಾನೂನಿನಲ್ಲಿ ಸ್ಪಷ್ಟವಾಗಿರಬೇಕಾಗುತ್ತದೆ, ನಾವು ಭರವಸೆ ಕೊಡುತ್ತೇವೆ ಎಂದರೆ ಭರವಸೆಗಳು ಕಾನೂನು ಆಗುವುದಿಲ್ಲ. ಆ ಕಾರಣದಿಂದ ಒಂದು ತಿಂಗಳು ಸಾಕಾಗುತ್ತದೆ, Joint Select Committee ಗೆ ಇದನ್ನು ಕಳುಹಿಸಿ, ಚರ್ಚೆ ಮಾಡಿ ತೆಗೆದುಕೊಂಡು ಬನ್ನಿ, ಕೂಲಂಕುಷವಾಗಿ ಚರ್ಚೆ ಮಾಡಿ ಬಂದದ್ದನ್ನು ಪಾಸ್ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ :- ನಾನು ಈಗಾಗಲೇ ಹೇಳಿದ್ದೇನೆ, ಇದು ಲಿಮಿಟ್ ಇದ್ದುದು, ಬೆಂಗಳೂರು ಸಿಟಿಗೆ ಲಿಮಿಟ್ ಇದ್ದುದು 18 ಕಿ.ಮೀ ಈ ಕಾನೂನನ್ನು ಈ ಸರ್ಕಾರ ತೆಗೆದುಕೊಂಡು ಬಂದದ್ದಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಾವು ಸ್ಪಷ್ಟವಾಗಿ ಹೇಳಿ, ಬಗರ್‌ಹುಕುಂಗೆ ಇನ್ನೊಂದು ಸಲ ಅರ್ಜಿ ತೆಗೆದುಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ಇಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ :- ಈಗಾಗಲೇ ನಾವು ಎರಡು ಸಲ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಏಪ್ರಿಲ್ 1990 ಅದಕ್ಕಿಂತ ಮುಂಚೆ unauthorized ಆಗಿ ಯಾರೂ ಸಾಗುವಳಿ ಮಾಡುತ್ತಿದ್ದರು, ಅಂಥವರಿಗೆ Form No.50 ಕರೆದೆವು. ಅದಕ್ಕೆ 6 ತಿಂಗಳು ಅವಧಿ ಕೊಟ್ಟೆವು, ಫೈಲ್ ಮಾಡಿದರು, ಅದರಲ್ಲಿ ಎಷ್ಟೋ ಕೇಸುಗಳನ್ನು accept ಮಾಡಿದರು, ಎಷ್ಟೋ ಕೇಸುಗಳನ್ನು reject ಮಾಡಿದರು. ಆಮೇಲೆ ಮತ್ತೊಂದು ಅವಧಿಯನ್ನು ಕೊಟ್ಟೆವು, 1994 ನಂತರ 1999 ರ ಸುಮಾರಿಗೆ ಮತ್ತೊಂದು ಸಲ ಅವಧಿಯನ್ನು ಕೊಟ್ಟೆವು. Form No.53 ಕೊಟ್ಟರು, ಆಮೇಲೆ

ಮತ್ತೊಂದಷ್ಟು ಜನ ಅರ್ಜಿಗಳನ್ನು ಕೊಟ್ಟರು. ಅದಾದ ಮೇಲೆಯೂ ಕೆಲವರು ಉಳಿದಿದ್ದಾರೆ, ಮಾನ್ಯ ಖರ್ಗೆಯವರು ಹೇಳಿದರು, ಕೆಲ ನೀರಾವರಿ ಜಮೀನುಗಳನ್ನು ಅಕ್ವೈರ್ ಮಾಡಿದ್ದಾರೆ, ಅಂಥ ವಿಶೇಷ ಪ್ರಕರಣಗಳು ಯಾವುದಾದರೂ ಸರ್ಕಾರದ ಗಮನಕ್ಕೆ ಬಂದರೆ ನಾವೆಲ್ಲ ಕುಳಿತು ವಿಚಾರ ಮಾಡೋಣ. ಅದಕ್ಕೆ ಇವತ್ತು ಮಾಧುಸ್ವಾಮಿಯವರು ಹೇಳಿದರಲ್ಲ, ಇವತ್ತು ಆ ರೀತಿ ಎಷ್ಟೆಷ್ಟು ಪ್ರಕರಣಗಳಿವೆ, ಅದನ್ನು ಸರ್ವೆ ಮಾಡಿಸುತ್ತೇವೆ.

ನಿಜವಾಗಿ ಎಷ್ಟು cultivation ಮಾಡಿದ್ದಾರೆ. ನಿಜವಾಗಿ ನಿಮಗೆ ಹೇಳಬೇಕಾದರೆ ಇವತ್ತು ಯಾವುವು rejected cases ಇವೆ, ಅದರಲ್ಲಿ 30% Form No.50, 53. reject ಆದ 30% ಕೇಸ್‌ಗಳಲ್ಲಿ ಅವರು actually cultivation ಮಾಡುತ್ತಿರಲಿಲ್ಲ. ಆ ಭೂಮಿಯಿರಲಿಲ್ಲ. ಅಂಥವರದ್ದು ಆ ground ಮೇಲೆ reject ಆಗಿವೆ. ಇದಕ್ಕೆ ನಿಜವಾಗಿ ಯಾರು bona fide ಉಳುಮೆ ಮಾಡಿದ್ದಾರೆ, ಈ ಗೋಮಾಳ ಎನ್ನುವಂಥ ಕಾರಣದ ಮೇಲೆ ಹೈಕೋರ್ಟ್ ತೀರ್ಪು ಬಂತು, ಗೋಮಾಳವೆನ್ನುವಂಥ ಕಾರಣದ ಮೇಲೆ ಎಷ್ಟೋ cases reject ಆಗಿವೆ. ಇವತ್ತು appeal ಮಾಡಿದೆವು, appeal ಆದ ಮೇಲೆ ಮತ್ತೆ ಕೆಲವರಿಗೆ ಅವಕಾಶ ಸಿಕ್ಕಿದ್ದೂ ಇವೆ, ಮತ್ತೆ ಅಪೀಲ್ ಆದ ಮೇಲೆ ಹೈಕೋರ್ಟ್‌ನವರು ಒಂದು ತೀರ್ಮಾನಕ್ಕೆ ಬಂದರು, ಹಾಗಾಗಿ...

ಶ್ರೀ ಜೆ.ಸಿ. ಮಾಧುಸ್ವಾಮಿ :- 53 ತಾವೇನು application ತೆಗೆದುಕೊಂಡಿದ್ದೀರಿ. Form 50 ಕೆಳಗೆ eligible ಇದ್ದವರಿಗೆ ತೆಗೆದುಕೊಂಡಿರುವುದು. ಸ್ವಲ್ಪ ದಾಖಲೆ ನೋಡಬೇಕು. ಯಾರು ಅವತ್ತು ಆಕಸ್ಮಾತ್ ಆಗಿ ಅಪ್ಲಿಕೇಶನ್ ಹಾಕಲಿಕ್ಕೆ ಆಗಿಲ್ಲ, ಆಕಸ್ಮಾತ್ ಆಗಿ ಯಾರ ಊರಲ್ಲಿರಲಿಲ್ಲ, ಅವರು ಪ್ರೂವ್ ಮಾಡಿ Form - 53 ನಲ್ಲಿ ಅರ್ಜಿ ಹಾಕಿರುವುದನ್ನು ಬಿಟ್ಟರೆ ಈ ರಾಜ್ಯದಲ್ಲಿ ಎರಡೂ ಸಲ ಅಪ್ಲಿಕೇಷನ್ ಹಾಕಲಿಕ್ಕೆ ಯಾರಿಗೂ ಅವಕಾಶ ಕೊಟ್ಟಿಲ್ಲ. ನೀವೇನು ಬಗರ್ ಹುಕುಂ ಕೇಸ್ ಎಂದು ತೆಗೆದುಕೊಂಡಿದ್ದೀರಿ ಅದನ್ನು it was one time measure ಎಂದು ತೆಗೆದುಕೊಂಡು ಆಕಸ್ಮಿಕವಾಗಿ miss ಆದವರು Form - 53 ನಲ್ಲಿ ಹಾಕಬಹುದು ಎಂದು ಹೇಳಿದ್ದೀರಿ ಅದನ್ನು ಬಿಟ್ಟರೆ fresh applications entertain ಮಾಡಿಲ್ಲ ನೀವು. ಅವರಿಗೆ eligibility 1985ರಲ್ಲೇ start ಆಗಬೇಕು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ಎರಡು ಸಾರಿ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಇಲ್ಲಿ ನಿಜವಾಗಿಯೂ bona fide cultivation ಮಾಡುವವರನ್ನು ಸರ್ಕಾರದವರು ಸರ್ವೆ ಮಾಡಿಸಿದ್ದೇವೆ. ಇನ್ನೂ ಅವರು ಅರ್ಜಿಯನ್ನು ಹಾಕಿಲ್ಲ, ಅವರು ಕಲ್ಟಿವೇಷನ್ ನಿಜವಾಗಿಯೂ ಮಾಡುತ್ತಿದ್ದಾರೆಯೇ ಎನ್ನುವಂಥಾದ್ದನ್ನು ಸರ್ವೆ ಮಾಡಿಸಿ ಅದು ಪ್ರೂವ್ ಆದರೆ ಅದನ್ನು ಕೂಡ ಕನ್ಸಿಡರ್ ಮಾಡಲಿಕ್ಕೆ ಸರ್ಕಾರ ತಯಾರಿದೆ. ಆಮೇಲೆ ಸಿದ್ಧರಾಮಯ್ಯನವರು ಹೇಳಿದರು, ಸಿಟಿ ಲಿಮಿಟ್ 18.ಕಿ.ಮೀ. ಬೆಂಗಳೂರು ನಗರದಲ್ಲಿ 18 ಕಿ.ಮೀ ವರೆಗೆ ನಾವೇನು ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅಧ್ಯಕ್ಷರೇ, ಇವತ್ತು ಬೃಹತ್ ಬೆಂಗಳೂರು ಮಾಡಿದರು, ಈ ಬೃಹತ್ ಬೆಂಗಳೂರು ಏರಿಯಾ ಈಗ extend ಆಯಿತು, ಅವರು ಮೊದಲನೆಯವನು ಅರ್ಜಿ ಹಾಕಿದ್ದವರು ಬೃಹತ್ ಬೆಂಗಳೂರು ಮಾಡದಿದ್ದರೆ ಸಿಗುತ್ತಿತ್ತು. ಉಡುಪಿಯಲ್ಲಿ ಹಾಗೇ ಆಯಿತು, extend ಮಾಡಿದ ಮೇಲೆ ಯಾರು eligible ಇದ್ದರೋ ಅವರಿಗೆ ಈಗ ತಪ್ಪಿಹೋಯಿತು. ಅದನ್ನು ಏನು ಮಾಡುತ್ತೀರಿ ಈಗ. ಅದರ ಬಗ್ಗೆ ಎರಡು ಸಲ ಪ್ರಶ್ನೆಯನ್ನು ಕೇಳಿದೆ. ಒಂದು ಸಲ ಮೊದಲು ಆ ವ್ಯಾಪ್ತಿಗೆ ಬರುತ್ತಿರಲಿಲ್ಲ. ನೀವು extend ಮಾಡಿದ್ದರಿಂದ ಅದನ್ನೂ ಹೊರಡಿಸಬೇಕಾಗುತ್ತದೆ, ಅದನ್ನು ನೀವು ಕ್ಲಾರಿಫೈ ಮಾಡಬೇಕಾಗುತ್ತದೆ.

ಶ್ರೀ ಕೃಷ್ಣ ಭೈರೇಗೌಡ :- ಅನೇಕ ತಾಲ್ಲೂಕುಗಳಲ್ಲಿ ಆಗುತ್ತದೆ, ಬೆಂಗಳೂರಿನ ಗ್ರಾಮಾಂತರದಲ್ಲಿಯೂ ಇಂಥವು ಆಗುತ್ತವೆ.

ಶ್ರೀ ಜಗದೀಶ್ ಶೆಟ್ಟರ್ :- ಬೆಂಗಳೂರು ಸಿಟಿಗೆ 18 ಕಿ.ಮೀ. ಒಳಗೆ ಇರುವುದು ಇವತ್ತೇನು ಈ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್ ಅನ್ನು ಈ ಸರ್ಕಾರ ತೆಗೆದುಕೊಂಡು ಬಂದದ್ದಲ್ಲ ಇದು. ಈಗಾಗಲೇ ಟೇಬಲ್‌ನಲ್ಲಿ mention ಮಾಡಿದ್ದಾರೆ. ಬೆಂಗಳೂರು ಸಿಟಿಗೆ ಲಿಮಿಟ್ ಇರುವಂಥಾದ್ದು 18. ಕಿ.ಮೀ ಒಳಗೆ ಇರುವಂಥದ್ದಕ್ಕೆ ಈ ಬಗರ್ ಹುಕುಂ ಅನ್ವಯವಾಗುವುದಿಲ್ಲ. ಆಮೇಲೆ ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಮಂಗಳೂರು, ಮೈಸೂರು ಇಲ್ಲಿ ಹತ್ತು ಕಿ.ಮೀ ಒಳಗೆ ಇರುವಂಥಾದ್ದಕ್ಕೆ ಅದು ಅಪ್ಲೈ ಆಗುವುದಿಲ್ಲ. ಆಮೇಲೆ ಅಲ್ಲಿ ಸ್ಯಾಂಕ್ಷನ್ ಮಾಡಲಿಕ್ಕೆ ನಮಗೆ ಬರುವುದಿಲ್ಲ. Karnataka Land Revenue Act ನಲ್ಲಿ ಹಿಂದೆ ಎಷ್ಟೋ reject ಆಗಿವೆ. ಹುಬ್ಬಳ್ಳಿ-ಧಾರವಾಡದಲ್ಲಿ ನಾನೇ ಈ

ಬಗರ್ ಹುಕುಂ ಅಧ್ಯಕ್ಷನಾಗಿ ಈ ಒಂದು ಕಾರಣದಿಂದ ರಿಜೆಕ್ಟ್ ಮಾಡಿದ್ದೇನೆ. ಅದು ಇವತ್ತು ಸಿಟಿ ಏರಿಯಾದಲ್ಲಿ ಬಂದುಬಿಟ್ಟಿದೆ, valuable property ಒಂದೊಂದು ಕೋಟಿ ರೂ. ಗೆ ಇದೆ. ಅಲ್ಲಿ ಯಾವುದೇ cultivation ಇಲ್ಲ ಏನೂ ಇಲ್ಲ. ಇವತ್ತು 18 ಕಿ.ಮೀ. ಒಳಗೆ ಬೆಂಗಳೂರು ಒಳಗೆ ಯಾರ cultivation ಮಾಡುತ್ತಾರೆ. ಹೀಗಾಗಿ ಇವತ್ತು 10 ಕಿ.ಮೀ. ಇದೆ. ಇದು ನಾ ಮಾಡಿದ ಕಾನೂನು ಅಲ್ಲ.

ಶ್ರೀ ಸಿದ್ಧರಾಮಯ್ಯ :- ಕಾನೂನನ್ನು ಯಾರಾದರೂ ಮಾಡಿರಲಿ ನೀವಾದರೂ ಮಾಡಿರಲಿ, ನಾವಾದರೂ ಮಾಡಿರಲಿ, ಸರ್ಕಾರ ಯಾರದ್ದಾದರು ಆಗಿರಲಿ, ಈ ಕಾನೂನನ್ನು ಈ ಹೌಸ್ ಮಾಡಿರುವುದು. ಲೆಜಿಸ್ಲೇಚರ್ ಮಾಡುವುದು ನಾನು ಹೇಳುವುದೇನೆಂದರೆ ಈಗ 10 ಕಿ.ಮೀ. ಒಳಗೆ ಅಲ್ಲಿ ಒಂದು ಊರಿನ ಬಹಳ ಜನ ಕಲ್ಟಿವೇಟ್ ಮಾಡುತ್ತಿದ್ದಾರೆ. ಸುಮಾರು 40--50 ವರ್ಷಗಳಿಂದ, ಈ ಅವರಿಗೆ ಆ ಜಮೀನನ್ನು ತೆಗೆದುಕೊಳ್ಳಬೇಕಾದರೆ ಅವರಿಗೆ compensatio ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇವೆ, ಏಕೆಂದರೆ ಅವರಿಗೆ ಸಕ್ರಮ ಮಾಡಲಿ ಬರುವುದಿಲ್ಲ.

ಅದು Government land ಆಗಿ ಬಿಡುತ್ತದೆ. ಮತ್ತೆ ಆ ರೈತರು ಪಾ ಅಷ್ಟು ವರ್ಷಗಳಿಂದ ಸ್ವಾಧೀನದಲ್ಲಿರುವವರು ನಲವತ್ತು ವರ್ಷಗಳಿಂದ ಆ ಜಮೀನಿ ಮೇಲೆ ಜೀವನ ಮಾಡಿಕೊಂಡು ಬಂದಿರುತ್ತಾರೆ. ಆ ಜಮೀನನ್ನು ಕಿತ್ತುಕೊಂಡ ಅವರು ನಿರ್ಗತಿಕರಾಗಿ ಬಿಡುತ್ತಾರೆ. ಬೇರೆ ಜಮೀನು ಇರುವುದಿಲ್ಲ, ಅವರಿ ಅನ್ಯಾಯವಾಗುವುದಿಲ್ಲವೇ? ಇನ್ನೊಬ್ಬರಿಗೆ ಸಕ್ರಮ ಮಾಡಿ ಅವರಿಗೆ ನೀವು ಪರಿಹಾ ಕೊಡುತ್ತೀರಿ, ಆದರೆ ಇವರಿಗೆ ಸಕ್ರಮ ಮಾಡಲಿಕ್ಕೆ ಬರುವುದಿಲ್ಲವೆಂದರೆ ಇವರಿ ಪರಿಹಾರವೂ ಸಿಗುವುದಿಲ್ಲ ಎಂದರೆ It leads to discrimination, ಕಾನೂನಿನ ಈ ತರಹ ಆಗುವುದಿಲ್ಲ, ಅದಕ್ಕೋಸ್ಕರವಾಗಿ ಅವರಿಗೆ ನೀವು ಏನ ಮಾಡಬೇಕೆನ್ನುವುದನ್ನು ಹೇಳಿ ಇದಕ್ಕೆ ಪರಿಹಾರವನ್ನು ಹುಡುಕಬೇಕಾಗುತ್ತದೆ. ಕಾರಣದಿಂದಲೇ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಈ ಲಿಮಿಟ್ ಏನಿದೆ, ಜಯಪ್ರಕಾಶ್ ಹೆಗ್ಡೆಯವರ ಹೇಳಿದ ಹಾಗೆ ಈ ಲಿಮಿಟ್ extend ಆಗುವುದಿಲ್ಲ. ಇವತ್ತೇನು ನಾವು origiona ಆಗಿ ಒಂದು ಲಿಮಿಟ್ ಹಾಕಿದ್ದೇವೆ. ಅಲ್ಲಿಯವರೆಗೆ ನಾವೇನಾದರೂ ಒಂದು

ತಿದ್ದುಪಡಿ ತೆಗೆದುಕೊಂಡು ಬಂದೇ ಮಾಡಬೇಕಾಗುತ್ತದೆ. ಅಂದರೆ ಎಲ್ಲಾದರೂ ಏನಾದರೂ ಹೆಚ್ಚು ಕಡಿಮೆ ಆದರೆ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡೋಣ.

ಶ್ರೀ ಎಸ್. ಸಿದ್ಧರಾಮಯ್ಯ :- cultivation ಮಾಡುವುದಿಲ್ಲವೆಂದು ಹೇಳುತ್ತಿದ್ದೀರಿ. There are so many farmers who are cultivating the land unauthorizedly.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಮುಖ್ಯಮಂತ್ರಿಗಳೇ ನನಗೆ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ, ನನ್ನ ಉಡುಪಿ ಏರಿಯಾ extend ಆದಾಗ ಈ ಪ್ರಶ್ನೆಯನ್ನು ಕೇಳಿದ್ದೆ, ಅದನ್ನು ಮಾಡಲಿಕ್ಕೆ ಬರುವುದಿಲ್ಲ ಎಂದು ಉತ್ತರಿಸಿದ್ದಾರೆ, ಅದಕ್ಕೋಸ್ಕರವಾಗಿ ಪುನಃ ಕೇಳುತ್ತಿದ್ದೇನೆ. ಈಗ ಮೊದಲು ಅವನು ಸಾಗುವಳಿ ಮಾಡಿಕೊಂಡು ಇದ್ದ. He was eligible, ಈಗ ನೀವು ಏರಿಯಾ extend ಮಾಡುತ್ತೀರಿ, ಆ border ನಿಂದ ಪುನಃ extend ಆದಾಗ ಅವನಿಗೆ he is not eligible ಎಂದು ಆಗುತ್ತದೆ. ಅದರ ಬಗ್ಗೆ ಕ್ಲ್ಯಾರಿಫಿಕೇಶನ್ ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :- ಈಗೇನು ಹಾಲಿ ಜಾರಿಯಲ್ಲಿರುವಂಥದ್ದೇ ಅಪ್ಲೈ ಆಗುವಂಥಾದ್ದು, ಈಗೇನು ಮತ್ತೆ ನಾವು ವಿಸ್ತರಣೆ ಮಾಡುತ್ತಿದ್ದೇವೆ. ಅಲ್ಲಿಂದ 18 ಕಿ.ಮೀ ಲೆಕ್ಕಕ್ಕೆ ತೆಗೆದುಕೊಳ್ಳುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಇದು ಒಂದು. ಈಗೇನು ಕೆಲವು ಸದಸ್ಯರು ಈ ಒಂದು ಬೌಂಡರಿ ಲಿಮಿಟೇಷನ್‌ನಿಂದ 40 ವರ್ಷಗಳಿಂದ ಕಲ್ಟಿವೇಶನ್ ಮಾಡತಕ್ಕಂಥಾದ್ದನ್ನು ನಾವು ಇನ್ನು regularize ಮಾಡಲಿಕ್ಕಾಗಲಿಲ್ಲವೆಂಬ ವಿಷಯವನ್ನು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ನಲವತ್ತು ವರ್ಷಗಳಿಂದ ಮಾಡಿರತಕ್ಕಂಥ ಜಮೀನು ಹಿಡುವಳಿದಾರರು ಏನು ಇದ್ದಾರೆ, ಅಂಥವರ ವಿಷಯದಲ್ಲಿ ಈಗೇನು 1993 ಮತ್ತು 1996 ನೇ ಇಸವಿಯಲ್ಲಿ ಕಾನೂನನ್ನು ಹೊಸದಾಗಿ ತಂದರು, ಆ ಸಂದರ್ಭದಲ್ಲಿ ಈ ಒಂದು ಕಾನೂನು ತಂದಿರುವ ಪ್ರಯುಕ್ತ ಈ ತೊಂದರೆ ಆಗುತ್ತಿರುವುದು.

ಈಗ ಆ ವಿಷಯದಲ್ಲಿ ಮತ್ತೆ ಪ್ರಸ್ತಾಪ ಮಾಡಬೇಕೆಂದರೆ ಬೇರೆ ಬಿಲ್ ಅನ್ನು ತರಬೇಕಾಗುತ್ತದೆ. ಈಗ ನಾವು ತರುತ್ತಿರುವ ಬಿಲ್ಲಿಗೂ ಅದಕ್ಕೂ ಸಂಬಂಧವಿಲ್ಲ. ಅದು ನಲವತ್ತು ವರ್ಷಗಳ ಹಿಂದಿನ ಚರ್ಚೆ, ಈಗ ಪ್ರಸ್ತಾಪ ಮಾಡುತ್ತಿದ್ದೀರಿ.

ಆದರೆ ಈ ಕಾನೂನು ತಂದಿರತಕ್ಕಂಥದ್ದು 1996 ನೇ ಇಸವಿಯಲ್ಲಿ. 1993 ರಲ್ಲಿ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಂದಂಥದ್ದು ಮತ್ತೆ ಅದನ್ನು regularize ಮಾಡಿರುವುದು 1997, ರಲ್ಲಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಹೊಸದಾಗಿ ಬೇಕಾದರೆ ತಿದ್ದುಪಡಿಯನ್ನು ತರಬೇಕೆಂದರೆ ಮುಂದಿನ ಸಾರಿ ತರಲಿಕ್ಕೆ ನಾವು ಕಂದಾಯ ಇಲಾಖೆಗೆ ಸೂಚನೆ ಕೊಡುತ್ತೇವೆ. ಆದರೆ ಈ ಒಂದು ಬಿಲ್ಲಿಗೂ ಅದಕ್ಕೂ ಸಂಬಂಧ ತರುವಂಥಾದ್ದು ಅನಾವಶ್ಯಕ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಇಲ್ಲ ಆಗುತ್ತದೆ, ಏನಾಗುತ್ತದೆಂದರೆ ಇಷ್ಟರವರೆಗೆ ಅವರ ಅರ್ಜಿ ಪೆಂಡಿಂಗ್ ಇತ್ತು, ಈಗ ಅವರು encroachers ಆಗುತ್ತಾರೆ.

ಶ್ರೀ ಕೃಷ್ಣ ಭೈರೇಗೌಡ :-- ಅವರ ಮೇಲೆ ಈ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- Limit further extension ಆಗುವುದಿಲ್ಲ.

ಶ್ರೀ ಎಸ್. ಸಿದ್ಧರಾಮಯ್ಯ :- ಈಗೇನಾಗುತ್ತದೆಂದರೆ ಅವರು ಹಿಂದೆ ಎಲ್ಲಾ ಅರ್ಜಿಗಳನ್ನು ಹಾಕಿದ್ದಾರೆ. ಈ ಅರ್ಜಿಗಳೆಲ್ಲಾ ರಿಜೆಕ್ಟ್ ಆಗಿವೆ. On the ground ಅವರು 10 ಕಿ.ಮೀ ಒಳಗೆ ಇದ್ದಾರೆ ಆದ್ದರಿಂದ ರೆಗ್ಯುಲರೈಜ್ ಮಾಡಲಿಕ್ಕೆ ಬರುವುದಿಲ್ಲವೆಂದು ರಿಜೆಕ್ಟ್ ಆಗಿವೆ ಅಲ್ಲವೇ? ಈಗೇನಾಗುತ್ತದೆಂದರೆ ಆ ರಿಜೆಕ್ಟ್ ಆಗಿದ್ದು ಒಂದಾಯಿತು, ಆ ನಲವತ್ತು ವರ್ಷಗಳಿಂದ ಅವರು ಅನುಭವದಲ್ಲಿದ್ದರೂ ಕೂಡ, ವ್ಯವಸಾಯ ಮಾಡಿಕೊಂಡು ಬಂದಿದ್ದರೂ ಕೂಡ ಈಗ ಅವರು encroachers ಆಗುತ್ತಾರೆ. ಭೂಕಬಳಿಕೆದಾರರು ಆಗಿಬಿಡುತ್ತಾರೆ. ಅವರು ಪಾಪ ಭೂಕಬಳಿಕೆದಾರರು ಅಲ್ಲ. ಭೂಕಬಳಿಕೆದಾರರಾದರೆ ಹೋಗಲಿ, ಇವರು 40 ವರ್ಷಗಳಿಂದ ಆರ್.ಟಿ.ಸಿ. ಬರೆಸಿಕೊಂಡು ಸ್ವತಃ ಅಲ್ಲೇ ವಾಸ ಮಾಡಿಕೊಂಡು ಅಲ್ಲೇ ವ್ಯವಸಾಯ ಮಾಡಿಕೊಂಡು ಇದ್ದಾರೆ, ಅವರಿಗೆ ಅನ್ಯಾಯವಾಗುತ್ತದಲ್ಲ, ಅದಕ್ಕೆ ಅವರಿಗೇನು protection ಕೊಡುತ್ತೀರಿ? ನೀವು ಏನು ಮಾಡುತ್ತೀರಿ? Protection ಕೊಡಬೇಕಾಗುತ್ತದೆ. Is it not going to be denial of their right?

ಶ್ರೀ ಜಗದೀಶ್ ಶೆಟ್ಟರ್ :- ಈಗ ಒಂದು ಸ್ಪಷ್ಟೀಕರಣ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ :- ಮಾನ್ಯ ಅಧ್ಯಕ್ಷರೇ, 4 ಎಕರೆ 38 ಗುಂಟೆಗೆ ಲಿಮಿಟ್ ಮಾಡಿದ್ದೀರಿ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದ್ಯಾವುದಕ್ಕೂ eligible ಅಲ್ಲ. ಇಲ್ಲಿ ಅವರು Form 50 ಕ್ಕೂ ಅರ್ಜಿ ಹಾಕಿಲ್ಲ, Form 53 ಕ್ಕೂ ಅರ್ಜಿ ಹಾಕಿಲ್ಲ. ನಾಳೆ ಬೆಳಿಗ್ಗೆಯಿಂದ ಅವರ ಪರಿಸ್ಥಿತಿ ಏನು? ಈ ಕಾನೂನು ತರುವುದಕ್ಕೆ ಮುಂಚೆಯೇ 64 ಎಕರೆಯನ್ನು ಬೇರೆಯವರಿಗೆ ಹಂಚಿ ಅಟ್ರಾಸಿಟಿ ಕೇಸ್ ಹಾಕಿರುವುದು 30 ವರ್ಷಗಳಿಂದ ಕಾಫಿ ತೋಟ ಮಾಡಿದವನಿಗೆ. ಅವರ ಕಾಫಿಯನ್ನು ಅವರು ಕೊಯ್ಯುವುದಕ್ಕೆ ಹೋಗಿದ್ದರಿಂದ ಅವರ ಮೇಲೆ ಅಟ್ರಾಸಿಟಿ ಕೇಸ್ ಹಾಕಿರುವುದು. ಒಂದು ವರ್ಷದೊಳಗೆ ಕಾಫಿ ತೋಟ ಬಂದು ಬಿಟ್ಟಿತು, ಕಾಫಿ ಕೊಯ್ದರು ಕೇಸ್ ಹಾಕಿದರು ಬೇರೆಯವರಿಗೆ ಹಂಚಿ. ಈ ರೀತಿ ಮಾಡುತ್ತಿರಬೇಕಾದರೆ ಈಗ ನಾಳೆ ನೀವು ಇದಕ್ಕೆ ತಿದ್ದುಪಡಿ ತರಬೇಕಾದರೆ ಈ ಕಾನೂನು ತರಬೇಕಾದರೆ ಆ ಕಾಫಿ ತೋಟಗಳ ಮಾಲೀಕರುಗಳ ಬಗ್ಗೆ ಏನನ್ನೂ ಹೇಳಿಲ್ಲ. ಅವರಿಗೆ ರೆಗ್ಯೂಲರೈಸ್ ಮಾಡಬೇಕು, ಅವರಿಗೊಂದು ಅಮೌಂಟ್ ಫಿಕ್ಸ್ ಮಾಡಿ ದುಡ್ಡು ಕಟ್ಟಿಸಿಕೊಂಡು ರೆಗ್ಯುಲರೈಸ್ ಮಾಡಿ ಎಂದು ಕಳೆದ ಮೂವತ್ತು ವರ್ಷಗಳಿಂದ ಕೇಳುತ್ತಿದ್ದಾರೆ, ಅವರ ಬಗ್ಗೆ ನೀವೇನು ಹೇಳುತ್ತಿಲ್ಲ. ಅದು ಚಿಕ್ಕಮಗಳೂರು, ಸಕಲೇಶಪುರ, ಕೊಡಗು, ತೀರ್ಥಹಳ್ಳಿ ಈ ಭಾಗಗಳಿಗೆ ಸಂಬಂಧಪಡುತ್ತದೆ. ಶಿವಮೊಗ್ಗದಲ್ಲಿಯೂ ಇದೆ, ಹಾಗಾಗಿ ಅದರ ಬಗ್ಗೆ ಹೇಳಿ.

ಶ್ರೀ ಚಿಕ್ಕನಗೌಡರು ದೊಡ್ಡನಗೌಡರು ಈಶ್ವರಗೌಡರು :- ಪಶ್ಚಿಮ ಘಟ್ಟದಲ್ಲಿ ಇದೇ ಪರಿಸ್ಥಿತಿ ಇದೆ. ದಯಮಾಡಿ ಇದಕ್ಕೆ ಒಂದು ರಕ್ಷಣೆ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಸಿ.ಟಿ. ರವಿಯವರು ಹಿಂದೆ ಈ ಬಗ್ಗೆ ಸದನದಲ್ಲಿ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಈ Coffee planters ಕೊಡಗು, ಚಿಕ್ಕಮಗಳೂರು, ಸಕಲೇಶ್‌ಪುರ ಭಾಗದಲ್ಲಿ ಏನಿದ್ದಾರೆ, ಅಲ್ಲಿ ಅವರಿಗೆ ಒಂದು ದೊಡ್ಡ ಸಮಸ್ಯೆಯೇ ಇದೆ. ಇವತ್ತು forest land, ಕಂದಾಯ ಇಲಾಖೆಯ ಭೂಮಿಗೆ ಸಂಬಂಧಪಟ್ಟಂತೆ ಹಲವಾರು ವರ್ಷಗಳಿಂದ ಅತಿಕ್ರಮಣ ಮಾಡಿ ಒಬ್ಬೊಬ್ಬರು 100 ಎಕರೆ, 200 ಎಕರೆ ಹೊಂದಿದ್ದಾರೆ, ಕೆಲವರು 50 ಎಕರೆಯನ್ನು ಮಾಡಿದ್ದಾರೆ. ಕೆಲವರು 10 ಎಕರೆಯನ್ನು ಮಾಡಿದ್ದಾರೆ. ಅಂತಹ ಕೇಸುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ್ದಾರೆ. ನೂರಾರು ವರ್ಷಗಳಿಂದ ಉಳಿಮೆ ಮಾಡಿಕೊಂಡು ಬಂದಿದ್ದಾರೆ, ಅದರ ಬಗ್ಗೆ ನಾನು ಪ್ರತ್ಯೇಕವಾಗಿ ಸಭೆಯನ್ನು ಕರೆದು ಅಲ್ಲಿ ಆ ಸಮಸ್ಯೆಗೆ ಯಾವರೀತಿ ಪರಿಹಾರ ಹುಡುಕಬೇಕು ಎನ್ನುವಂಥಾದ್ದನ್ನು

ವಿಚಾರ ಮಾಡುತ್ತೇನೆಂದು ಈ ಸದನದಲ್ಲಿ ಹೇಳಿದ್ದೇನೆ. ಆದಷ್ಟು ಬೇಗನೆ ಆ ಸಭೆಯನ್ನು ಕರೆಯುತ್ತೇನೆ.

ಆಮೇಲೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದರು, ಈ ಲಿಮಿಟ್ 10, 5, 18, ಕಿ.ಮೀ ಏನು ಹಾಕಿದ್ದೇವೆ ಇವತ್ತು ಆ ನಗರ ವಿಸ್ತರಣೆ ಆಗುವ ರೀತಿಯಲ್ಲಿ ಲಿಮಿಟ್ ಜಾಸ್ತಿಯಾಗುವುದಿಲ್ಲ. ಮೊದಲು ಏನು ಲಿಮಿಟ್ ಹಾಕಿದ್ದೇವೆ, ಅದೇ continue ಆಗುತ್ತದೆಂದು ಸ್ಪಷ್ಟೀಕರಣ ಮಾಡುತ್ತಿದ್ದೇನೆ ಮತ್ತು ಈಗ rejected case ಇವೆ ಅವುಗಳ ಬಗ್ಗೆ ಈಗ ಹೊಸದಾಗಿ ಒಂದು ಅವಕಾಶ ಕೊಡಬೇಕೆಂದು ಕೆಲವರು ಶಾಸಕರು ಹೇಳಿದರು, ಅದರ ಬಗ್ಗೆ bona fide cultivators ಯಾರಿದ್ದಾರೆ, ಅವರಲ್ಲಿ ರಿಜೆಕ್ಟ್ ಆದಂಥವರು ಯಾರಿದ್ದಾರೆ, ಅಂಥವರ ಬಗ್ಗೆ ಮತ್ತೆ ಸರ್ಕಾರ ಚಿಂತನೆಯನ್ನು ಮಾಡಿ ಅವಕಾಶವನ್ನು ಕೊಡುವುದಾದರೆ ಆ ರೀತಿಯ ಅವಕಾಶವನ್ನು ಕೊಡುತ್ತೇವೆ. ಹೀಗಾಗಿ ಈಗ ನಾನು ದಯವಿಟ್ಟು ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ವಿನಂತಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ 2007 ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 3 ರವರೆಗೆ</u>

ಅಧ್ಯಕ್ಷರು :– "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

(ಖಂಡ 2, 3 ಮತ್ತು 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.